**ಡಾ|| ತಳವಾರ ಸಾಬಣ್ಣ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರಡಿ ನೀಡಿರುವ ಸೂಚನೆ ಸಂಖ್ಯೆ 79ಕ್ಕೆ**
**ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಹೇಳಿಕೆ**

---

## ಸೂಚನೆ:-

ಸಾಂಪ್ರದಾಯಿಕ ಮೀನುಗಾರರಲ್ಲದಿರುವವರು ಮೀನುಗಾರಿಕೆ ವ್ಯಾಪಾರ ಮಾಡುತ್ತಿರುವುದರಿಂದ ಗಂಗಾಮತಸ್ಥ ಸಮುದಾಯದವರಿಗೆ ಅನ್ಯಾಯವಾಗುತ್ತಿರುವ ಕುರಿತು.

## ಹೇಳಿಕೆ:-

ಮೀನುಗಾರಿಕೆ ಇಲಾಖೆಯ ವತಿಯಿಂದ ನೇರವಾಗಿ ಯಾವುದೇ ಕೆರೆಗಳಲ್ಲಿ ಮೀನನ್ನು ಸಾಕಾಣಿಕೆ ಮಾಡುತ್ತಿರುವುದಿಲ್ಲ. ಪ್ರಸ್ತುತ ಚಾಲ್ತಿಯಲ್ಲಿರುವ ಒಳನಾಡು ಜಲಸಂಪನ್ಮೂಲಗಳ ವಿಲೇವಾರಿ ಕಾರ್ಯನೀತಿ-2014 ರಂತೆ 4036 ಕೆರೆ / 85 ಜಲಾಶಯ / 189 ನದಿ ಭಾಗಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ / ಟೆಂಡರ್-ಕಂ-ಹರಾಜು / ಪರವಾನಗಿ ಮೂಲಕ ವಿಲೇವಾರಿ ಮಾಡಿ, ಮೀನು ಸಾಕಾಣಿಕೆಗೆ ಅವಕಾಶ ಕಲ್ಪಿಸಲಾಗಿದೆ. ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ವಿಲೇವಾರಿಯಿಂದ ಬಂದ ಆದಾಯದ ವಿವರವನ್ನು **ಅನುಬಂಧ-1(a) ಮತ್ತು 1(b)** ರಲ್ಲಿ ನೀಡಲಾಗಿದೆ.

40 ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಹೊಂದಿರುವ ಕೆರೆಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯು ಮೀನುಗಾರಿಕೆ ಇಲಾಖೆ ವ್ಯಾಪ್ತಿಗೆ ಹಾಗೂ 40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಹೊಂದಿರುವ ಕೆರೆಗಳ (ಪಟ್ಟಣ ಪಂಚಾಯಿತಿ / ಪುರಸಭೆ / ನಗರ ಸಭೆ / ಮಹಾನಗರ ಪಾಲಿಕೆ/ ಬಿ.ಬಿ.ಎಂ.ಪಿ ವ್ಯಾಪ್ತಿ ಹೊರತು ಪಡಿಸಿ) ಮೀನು ಪಾಶುವಾರು ಹಕ್ಕಿನ ವಿಲೇವಾರಿಯು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಒಳಪಟ್ಟಿರುತ್ತದೆ. ಇದಲ್ಲದೆ ರಾಜ್ಯದಲ್ಲಿರುವ 85 ಜಲಾಶಯ ಹಾಗೂ ಸುಮಾರು 5853 ಕಿ.ಮೀ ನದಿ ಭಾಗದಲ್ಲಿನ ಮೀನು ಪಾಶುವಾರು ಹಕ್ಕಿನ ವಿಲೇವಾರಿ ಸಹ ಮೀನುಗಾರಿಕೆ ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಅರ್ಹ ಮೀನುಗಾರರ ಸಹಕಾರ ಸಂಘಗಳು / ಮೀನುಗಾರರ ಉತ್ಪಾದಕ ಸಂಸ್ಥೆಗಳು ನೇರ ಗುತ್ತಿಗೆ ಮುಖಾಂತರ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಕಾರ್ಯನೀತಿ-2014ರನ್ವಯ ಗುತ್ತಿಗೆ ಮೊತ್ತ ಪಾವತಿಸಿ, 5 ವರ್ಷಗಳ ಅವಧಿಗೆ ಗುತ್ತಿಗೆಗೆ ಪಡೆದುಕೊಳ್ಳಲು ಅವಕಾಶವಿರುತ್ತದೆ. ನೇರ ಗುತ್ತಿಗೆ ಮೂಲಕ ವಿಲೇವಾರಿ ಮಾಡಿದ ನಂತರ ಬಾಕಿ ಉಳಿಯುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮುಖಾಂತರ ವಿಲೇವಾರಿ ಮಾಡಲಾಗುತ್ತದೆ.

-2-

ಈ ರೀತಿ ಗುತ್ತಿಗೆ / ಬಿಡ್‌ನಲ್ಲಿ ಪಡೆದುಕೊಂಡ ಗುತ್ತಿಗೆ / ಬಿಡ್‌ದಾರರು ಪ್ರತಿ ಹೆಕ್ಟೇರ್ ಜಲ ವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಇಲಾಖೆ ಅಥವಾ ಇಲಾಖೆಯಿಂದ ಅನುಮೋದಿತ ಮೀನು ಮರಿ ಉತ್ಪಾದನೆ ಕೇಂದ್ರಗಳಿಂದ ಖರೀದಿಸಿ ಮೀನು ಸಾಕಾಣಿಕೆ ಕೈಗೊಳ್ಳಲು ಅವಕಾಶವಿರುತ್ತದೆ. ಈ ರೀತಿ ಖರೀದಿಸಿ ಮೀನು ಸಾಕಾಣಿಕೆ ಕೈಗೊಳ್ಳುವ ಮೀನುಗಾರಿಕೆ ಮೀನುಗಾರರ ಸಹಕಾರ ಸಂಘ / ಮೀನುಗಾರರ ಉತ್ಪಾದಕ ಸಂಸ್ಥೆಗಳಿಗೆ ಜಲವಿಸ್ತೀರ್ಣಕ್ಕನುಗುಣವಾಗಿ ಗರಿಷ್ಠ ರೂ.20,000/- ಹಾಗೂ ಖಾಸಗಿ ವ್ಯಕ್ತಿಗಳಿಗೆ ಜಲವಿಸ್ತೀರ್ಣಕ್ಕನುಗುಣವಾಗಿ ಗರಿಷ್ಠ ರೂ.5,000/-ಗಳ ಸಹಾಯ ಧನ ನೀಡಲಾಗುತ್ತಿದೆ. ಮುಂದುವರೆದು, ಕೆರೆಗಳ ಅಂಚಿನಲ್ಲಿ ಕೊಳಗಳನ್ನು ನಿರ್ಮಾಣ ಮಾಡಿಕೊಂಡು ಮೀನುಮರಿ ಸಾಕಾಣಿಕೆ ಕೈಗೊಳ್ಳಲು ವಿಸ್ತೀರ್ಣಕ್ಕನುಗುಣವಾಗಿ ಗರಿಷ್ಠ 1 ಹೆಕ್ಟೇರ್ ಹಾಗೂ ಜಲಾಶಯಗಳ ಅಂಚಿನಲ್ಲಿ ಕೊಳಗಳನ್ನು ನಿರ್ಮಾಣ ಮಾಡಿಕೊಂಡು ಮೀನುಮರಿ ಸಾಕಾಣಿಕೆ ಕೈಗೊಳ್ಳಲು ವಿಸ್ತೀರ್ಣಕ್ಕನುಗುವಾಗಿ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಪ್ರತಿ ಹೆಕ್ಟೇರ್‌ಗೆ ರೂ.2.5 ಲಕ್ಷ ಸಹಾಯಧನ ನೀಡಲಾಗುತ್ತಿದೆ.

ಸೂಕ್ತ ಖಾಸಗಿ ಜಮೀನಿನಲ್ಲಿ ಕೊಳ ನಿರ್ಮಾಣ ಮಾಡಿ ಮೀನು ಸಾಕಾಣಿಕೆ ಕೈಗೊಳ್ಳಲು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಅವಕಾಶವಿರುತ್ತದೆ. ಈ ಯೋಜನೆಯಡಿ ಕೊಳ ನಿರ್ಮಾಣಕ್ಕಾಗಿ ಘಟಕ ವೆಚ್ಚ 7.00 ಲಕ್ಷ ಹಾಗೂ ಹೂಡಿಕೆ ವೆಚ್ಚ ರೂ. 4.00 ಲಕ್ಷ ಇದ್ದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಮಹಿಳೆಯರಿಗೆ ಶೇ. 60 ರಷ್ಟು ಹಾಗೂ ಇತರ ವರ್ಗದವರಿಗೆ ಶೇ 40 ರಷ್ಟು ಸಹಾಯಧನ ನೀಡಲಾಗುತ್ತಿದೆ. ಖಾಸಗಿ ಕೊಳಗಳಲ್ಲಿ ಪ್ರತಿ ಹೆಕ್ಟೇರ್‌ಗೆ 10,000 ಬಲಿತ ಬಿತ್ತನೆ ಮೀನು ಮರಿಗಳನ್ನು ಬಿತ್ತನೆ ಮಾಡಿ ಮೀನು ಸಾಕಾಣಿಕೆ ಕೈಗೊಳ್ಳಬಹುದಾಗಿರುತ್ತದೆ.

ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ವಿಲೇ ಮಾಡಲು ಅನುಸರಿಸುವ ಅಂಶಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. ಪ್ರಮುಖ ಅಂಶಗಳು ಕೆಳಕಂಡಂತಿವೆ.

· ಕಾರ್ಯನೀತಿ-2014ರನ್ವಯ ನೇರ ಗುತ್ತಿಗೆ ಮುಖಾಂತರ ಜಲಸಂನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿಲೇ ಮಾಡಲು ಅರ್ಹ ಮೀನುಗಾರರ ಸಹಕಾರ ಸಂಘಗಳಿಂದ ಅರ್ಜಿ ಆಹ್ವಾನಿಸಿ ಅರ್ಹ ಮೀನುಗಾರರ ಸಹಕಾರ ಸಂಘಗಳಿಗೆ ಗರಿಷ್ಠ 300 ಹೆಕ್ಟೇರ್ ಜಲ ವಸ್ತೀರ್ಣ ಅಥವಾ 3 ಕೆರೆಗಳು ಅಥವಾ 300 ಹೆಕ್ಟೇರ್ ಜಲವಿಸ್ತೀರ್ಣ ಮೀರಿದ್ದಲ್ಲಿ 1 ಕೆರೆ ಅಥವಾ 1 ಜಲಾಶಯ ಅಥವಾ ಗರಿಷ್ಠ 3 ನದಿ ಭಾಗಗಳನ್ನು ಗುತ್ತಿಗೆಗೆ ನೀಡಲಾಗುತ್ತಿದೆ. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಪಸಂಮೀ ಇ-104 ಮೀಇಇ 2022 ದಿನಾಂಕ: 2-07-2022ರ ಆದೇಶದಂತೆ ಜಲಸಂಪನ್ಮೂಲಗಳಿಗೆ ನೀಡಿದ ನಂತರ ಆದ್ಯತೆಯಲ್ಲಿ

ಮೀನುಗಾರಿಕೆ ಇಲಾಖೆಯಿಂದ ಅನಿಮತಿಸಲಾದ ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs)ಗಳಿಗೆ ನೀಡುವ ಸಂದರ್ಭದಲ್ಲಿ ಈ ಆದೇಶದ **ಅನುಬಂಧ-3** ರಲ್ಲಿ ನಮೂದಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಲು ಆದೇಶಿಸಲಾಗಿದೆ. ಮೀನುಗಾರರ ಸಹಕಾರ ಸಂಘಗಳಿಗೆ ನೇರಗುತ್ತಿಗೆ ನೀಡುವ ಮಾದರಿಯಲ್ಲಿಯೇ ಗರಿಷ್ಠ 300 ಹೆಕ್ಟೇರ್ ಜಲವಿಸ್ತೀರ್ಣ ಅಥವಾ 3 ಕೆರೆಗಳು ಅಥವಾ 300 ಹೆಕ್ಟೇರ್ ಜಲ ವಿಸ್ತೀರ್ಣ ಮೀರಿದ್ದಲ್ಲಿ 1 ಕೆರೆ ಅಥವಾ 1 ಜಲಾಶಯ ಅಥವಾ ಗರಿಷ್ಠ 3 ನದಿಭಾಗಗಳನ್ನು ಗುತ್ತಿಗೆಗೆ ನೀಡಲಾಗುತ್ತಿದೆ.

ನೇರ ಗುತ್ತಿಗೆ ಮುಖಾಂತರ ವಿಲೇಯಾಗದ ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು/ ಇ-ಟೆಂಡರ್ ಮುಖಾಂತರ ವಿಲೇ ಮಾಡಲಾಗುವುದು. ವಿಲೇ ಮಾಡಲು ಅನುಸರಿಸುವ ವಿಧಾನಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ.

ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. (**ಅನುಬಂಧ-5** ನೀಡಲಾಗಿದೆ) ಇದುವರೆಗೂ ರಾಜ್ಯದ ಜಲಸಂಪನ್ಮೂಲಗಳಲ್ಲಿ 353 ಜಲಸಂಪನ್ಮೂಲಗಳನ್ನು ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಹಾಗೂ 145 ಜಲಸಂಪನ್ಮೂಲಗಳನ್ನು ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಮೀನು ಪಾಶುವಾರು ಹಕ್ಕನ್ನು ವಿಲೇಗೊಳಿಸಲಾಗಿರುತ್ತದೆ.

ಜಲಸಂಪನ್ಮೂಲಗಳನ್ನು ಮೊದಲು ಅರ್ಹ ಮೀನುಗಾರರ ಸಹಕಾರ ಸಂಘಗಳಿಂದ ಅರ್ಜಿಗಳನ್ನು ಆಹ್ವಾನಿಸಿ ನಿಯಮಾನುಸಾರ ಅರ್ಹತೆಯನ್ನು ಹೊಂದಿದ ಸಂಘಕ್ಕೆ ನೇರ ಗುತ್ತಿಗೆ ಮೂಲಕ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲಾಗುತ್ತಿದೆ. 2ನೇ ಆದ್ಯತೆಯಲ್ಲಿ ಮೀನುಗಾರರ ಉತ್ಪಾದಕರ ಸಂಸ್ಥೆಗಳಿಗೆ ನೇರ ಗುತ್ತಿಗೆ ಮೂಲಕ ಮೀನು ಪಾಶುವಾರು ಹಕ್ಕನ್ನು ನೀಡಲಾಗುತ್ತಿದೆ. 3ನೇ ಆದ್ಯತೆಯಲ್ಲಿ ಗುತ್ತಿಗೆ ಕೋರದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿವಿಧ ವರ್ಗದ ವ್ಯಕ್ತಿ / ಸಾರ್ವಜನಿಕರು ಟೆಂಡರ್-ಕಂ-ಹರಾಜು / ಇ-ಟೆಂಡರ್ ಮೂಲಕ ವಿಲೇವಾರಿ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಮೀನುಗಾರಿಕೆ ಸಹಕಾರ ಸಂಘಗಳಲ್ಲಿನ ವಿವಿಧ ವರ್ಗದ ಮೀನುಗಾರರ ಸದಸ್ಯರ ಜೀವನೋಪಾಯ ಮತ್ತು ಆರ್ಥಿಕ ಬಲವರ್ಧನೆಗೆ ಮೀನುಗಾರಿಕೆ ಇಲಾಖೆಯಿಂದ ಒತ್ತು ನೀಡಲಾಗುತ್ತಿದೆ.

ಪ್ರಸ್ತುತ ಗುತ್ತಿಗೆ ಕಾರ್ಯನೀತಿ-2014 ರಂತೆ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲಾಗುತ್ತಿದ್ದು, ಮೊದಲ ಆದ್ಯತೆಯನ್ನು ಮೀನುಗಾರರ ಸಹಕಾರ ಸಂಘಗಳಿಗೆ ನೀಡಲಾಗುತ್ತಿದೆ. ಗಂಗಾಮತಸ್ಥ, ಕೋಲಿ, ಬೆಸ್ತ, ಮೊಗವೀರ, ಅಂಬಿಗ ಮುಂತಾದ ಪರ್ಯಾಯ ಸಮುದಾಯದವರು ಇಲಾಖೆಯಿಂದ ಅನುಮತಿ ಪಡೆದು ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮೂಲಕ ಪಡೆಯುತ್ತಿರುತ್ತಾರೆ. ಹಾಗಾಗಿ ಸದರಿ ಸಮುದಾಯದವರಿಗೆ ಜಲಸಂಪನ್ಮೂಲಗಳ ಗುತ್ತಿಗೆ ಪಡೆದು ಜೀವನ ನಡೆಸಲು ಯಾವುದೇ ತೊಂದರೆಯಾಗುತ್ತಿರುವುದಿಲ್ಲ.

ಮುಂದುವರೆದು, ಈ ಮೇಲೆ ವಿವರಿಸಿರುವ ಗುತ್ತಿಗೆ ಕಾರ್ಯನೀತಿ-2014 ರಂತೆ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುತ್ತಿದ್ದು, ಇಲಾಖೆಯಿಂದ ತಾಂತ್ರಿಕ ಸಹಾಯವನ್ನು ನೀಡಲಾಗುತ್ತಿರುತ್ತದೆ. ಆದ್ದರಿಂದ, ಗುತ್ತಿಗೆ ಕಾರ್ಯನೀತಿ-2014 ರಂತೆ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ಜಲಸಂಪನ್ಮೂಲಗಳನ್ನು ನೀಡಲು ಅವಕಾಶ ಇರುವುದಿಲ್ಲ.

---

ಸಂಖ್ಯೆ: ಪಸಂಮೀ ಇ-278 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು
ಕರ್ನಾಟಕ ಸರ್ಕಾರ

# ಅನುಬಂಧ-1(a)

**2021-22ನೇ ಸಾಲಿನ ಮೀನುಗಾರಿಕೆ ಇಲಾಖಾ ಕೆರೆಗಳ ವಿಲೇವಾರಿ ವಿವರ:**

| ಕ್ರಮ ಸಂ | ಜಿಲ್ಲೆ | ಜಲಸಂಪನ್ಮೂಲ | ಸಂಖ್ಯೆ | ಗುತ್ತಿಗೆ | ಮೊತ್ತ | ಟೆಂಡರ್ ಕಂ ಹರಾಜು/ ಇ-ಟೆಂಡರ್ | ಮೊತ್ತ | ಪರವಾನಗಿ | ಮೊತ್ತ |
|---|---|---|---|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | ಕೆರೆ | 103 | 3 | 44056 | 76 | 8014620 | 0 | 0 |
| | | ನದಿಭಾಗ | 8 | 0 | 0 | 0 | 0 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 2 | ಂಗಳೂರು ನಗರ | ಕೆರೆ | 193 | 42 | 692879 | 91 | 7193353 | 1 | 9000 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 2 | 0 | 0 | 0 | 0 | 0 | 0 |
| 3 | ಚಿಕ್ಕಬಳ್ಳಾಪುರ | ಕೆರೆ | 214 | 6 | 33019 | 200 | 5291836 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 4 | ಕೋಲಾರ | ಕೆರೆ | 146 | 9 | 2129434 | 95 | 6477420 | 5 | 39000 |
| | | ನದಿಭಾಗ | 3 | 0 | 0 | 0 | 0 | 2 | 231638 |
| | | ಜಲಾಶಯ | 2 | 0 | 0 | 1 | 33638 | 1 | 198000 |
| 5 | ರಾಮನಗರ | ಕೆರೆ | 109 | 13 | 461334 | 115 | 5001600 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 4 | 0 | 0 | 0 | 0 | 0 | 0 |
| 6 | ತುಮಕೂರು | ಕೆರೆ | 401 | 32 | 1911235 | 261 | 1421107 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 4 | 0 | 0 | 0 | 0 | 0 | 0 |
| 7 | ಾಮರಾಜನಗರ | ಕೆರೆ | 91 | 20 | 641996 | 59 | 1359825 | 0 | 0 |
| | | ನದಿಭಾಗ | 5 | 1 | 4824 | 0 | 0 | 2 | 51000 |
| | | ಜಲಾಶಯ | 3 | 3 | 151985 | 0 | 0 | 0 | 0 |
| 8 | ಹಾಸನ | ಕೆರೆ | 178 | 19 | 436685 | 113 | 2831101 | 0 | 0 |
| | | ನದಿಭಾಗ | 8 | 0 | 0 | 0 | 0 | 0 | 0 |
| | | ಜಲಾಶಯ | 3 | 0 | 0 | 0 | 0 | 0 | 0 |
| 9 | ಕೊಡಗು | ಕೆರೆ | 9 | 0 | 0 | 9 | 23879 | 0 | 0 |
| | | ನದಿಭಾಗ | 9 | 2 | 22355 | 0 | 0 | 7 | 36100 |
| | | ಜಲಾಶಯ | 2 | 1 | 343900 | 1 | 355391 | 0 | 0 |
| 10 | ಮಂಡ್ಯ | ಕೆರೆ | 179 | 50 | 2037522 | 124 | 5506707 | 0 | 0 |
| | | ನದಿಭಾಗ | 26 | 10 | 41716 | 0 | 0 | 4 | 47470 |
| | | ಜಲಾಶಯ | 4 | 0 | 0 | 0 | 0 | 0 | 0 |
| 11 | ಮೈಸೂರು | ಕೆರೆ | 99 | 39 | 919111 | 58 | 2790861 | 0 | 0 |
| | | ನದಿಭಾಗ | 12 | 3 | 16906 | 0 | 0 | 0 | 0 |
| | | ಜಲಾಶಯ | 3 | 2 | 1026914 | 0 | 0 | 0 | 0 |
| 12 | ಿಕ್ಕಮಗಳೂರು | ಕೆರೆ | 128 | 12 | 282350 | 81 | 1463763 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 2 | 0 | 0 | 0 | 0 | 0 | 0 |
| 13 | ಚಿತ್ರದುರ್ಗ | ಕೆರೆ | 169 | 0 | 0 | 97 | 3795842 | 2 | 3000 |
| | | ನದಿಭಾಗ | 3 | 0 | 0 | 0 | 0 | 0 | 0 |
| | | ಜಲಾಶಯ | 3 | 0 | 0 | 0 | 0 | 0 | 0 |
| 14 | ದಾವಣಗೆರೆ | ಕೆರೆ | 94 | 25 | 308002 | 61 | 2977025 | 0 | 0 |
| | | ನದಿಭಾಗ | 7 | 4 | 23813 | 0 | 0 | 0 | 0 |
| | | ಜಲಾಶಯ | 2 | 1 | 84325 | 0 | 0 | 1 | 243000 |
| 15 | ಶಿವಮೊಗ್ಗ | ಕೆರೆ | 446 | 14 | 111025 | 426 | 7877130 | 0 | 0 |
| | | ನದಿಭಾಗ | 9 | 2 | 11542 | 0 | 0 | 5 | 405000 |

| | | | | | | | | | |
|---|---|---|---|---|---|---|---|---|---|
| | | ಜಲಾಶಯ | 9 | 0 | 0 | 0 | 0 | 4 | 308500 |
| 16 | ಬೀದರ್ | ಕೆರೆ | 92 | 30 | 400808 | 57 | 858182 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 3 | 2 | 156746 | 0 | 0 | 0 | 0 |
| 17 | ಕಲಬುರ್ಗಿ | ಕೆರೆ | 82 | 28 | 358507 | 51 | 1622898 | 0 | 0 |
| | | ನದಿಭಾಗ | 11 | 7 | 60733 | 0 | 0 | 4 | 47200 |
| | | ಜಲಾಶಯ | 6 | 3 | 640553 | 1 | 245304 | 2 | 66000 |
| 18 | ರಾಯಚೂರು | ಕೆರೆ | 80 | 18 | 358404 | 40 | 3316434 | 0 | 0 |
| | | ನದಿಭಾಗ | 9 | 6 | 60784 | 0 | 0 | 1 | 8000 |
| | | ಜಲಾಶಯ | 3 | 0 | 0 | 3 | 1033659 | 0 | 0 |
| 19 | ಯಾದಗಿರಿ | ಕೆರೆ | 74 | 7 | 130570 | 61 | 2830757 | 0 | 0 |
| | | ನದಿಭಾಗ | 16 | 6 | 50870 | 0 | 0 | 5 | 104000 |
| | | ಜಲಾಶಯ | 2 | 0 | 0 | 2 | 124040 | 0 | 0 |
| 20 | ಬಳ್ಳಾರಿ | ಕೆರೆ | 100 | 25 | 359079 | 58 | 2009651 | 0 | 0 |
| | | ನದಿಭಾಗ | 2 | 0 | 0 | 0 | 0 | 1 | 25500 |
| | | ಜಲಾಶಯ | 4 | 1 | 491357 | 0 | 0 | 1 | 55500 |
| 21 | ಕೊಪ್ಪಳ | ಕೆರೆ | 52 | 16 | 326691 | 29 | 677142 | 0 | 0 |
| | | ನದಿಭಾಗ | 4 | 4 | 28115 | 0 | 0 | 0 | 0 |
| | | ಜಲಾಶಯ | 5 | 0 | 0 | 4 | 185428 | 1 | 90000 |
| 22 | ಉಡುಪಿ | ಕೆರೆ | 7 | 0 | 0 | 6 | 269505 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 23 | ಉತ್ತರಕನ್ನಡ | ಕೆರೆ | 86 | 7 | 29904 | 79 | 696655 | 0 | 0 |
| | | ನದಿಭಾಗ | 14 | 2 | 150310 | 0 | 0 | 1 | 10000 |
| | | ಜಲಾಶಯ | 8 | 0 | 0 | 0 | 0 | 1 | 55500 |
| 24 | ಬೆಳಗಾವಿ | ಕೆರೆ | 221 | 9 | 53525 | 98 | 880219 | 0 | 0 |
| | | ನದಿಭಾಗ | 7 | 0 | 0 | 0 | 0 | 0 | 0 |
| | | ಜಲಾಶಯ | 5 | 0 | 0 | 0 | 0 | 0 | 0 |
| 25 | ಬಾಗಲಕೋಟೆ | ಕೆರೆ | 47 | 16 | 195515 | 21 | 380809 | 0 | 0 |
| | | ನದಿಭಾಗ | 6 | 3 | 23585 | 0 | 0 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 26 | ಧಾರವಾಡ | ಕೆರೆ | 128 | 124 | 1251587 | 124 | 1254653 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 1 | 0 | 0 | 0 | 0 | 0 | 0 |
| 27 | ಗದಗ | ಕೆರೆ | 32 | 6 | 155935 | 16 | 251993 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 28 | ಹಾವೇರಿ | ಕೆರೆ | 203 | 46 | 446994 | 144 | 3417569 | 0 | 0 |
| | | ನದಿಭಾಗ | 19 | 13 | 53483 | 0 | 0 | 3 | 3750 |
| | | ಜಲಾಶಯ | 1 | 1 | 34997 | 0 | 0 | 0 | 0 |
| 29 | ವಿಜಯಪುರ | ಕೆರೆ | 160 | 17 | 251064 | 105 | 1262453 | 0 | 0 |
| | | ನದಿಭಾಗ | 8 | 0 | 0 | 0 | 0 | 0 | 0 |
| | | ಜಲಾಶಯ | 2 | 0 | 0 | 0 | 0 | 0 | 0 |
| ಒಟ್ಟು | | | **4192** | **710** | **17807044** | **2767** | **83732449** | **54** | **2037158** |

# ಅನುಬಂಧ-1(b)

**2022-23ನೇ ಸಾಲಿನ ಮೀನುಗಾರಿಕೆ ಇಲಾಖಾ ಕೆರೆಗಳ ವಿಲೇವಾರಿ ವಿವರ:**

| ಕ್ರಮ ಸಂ | ಜಿಲ್ಲೆ | ಜಲಸಂಪನ್ಮೂಲ | ಸಂಖ್ಯೆ | ಗುತ್ತಿಗೆ | ಮೊತ್ತ | ಟೆಂಡರ್ ಕಂ ಹರಾಜು/ ಇ-ಟೆಂಡರ್ | ಮೊತ್ತ | ಪರವಾನಗಿ | ಮೊತ್ತ |
|---|---|---|---|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | ಕೆರೆ | 103 | 5 | 51642 | 72 | 9269124 | 0 | 0 |
| | | ನದಿಭಾಗ | 8 | 0 | 0 | 0 | 0 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 2 | ಂಗಳೂರು ನಗರ | ಕೆರೆ | 193 | 72 | 1779106 | 76 | 9165886 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 2 | 0 | 0 | 0 | 0 | 2 | 648000 |
| 3 | ಚಿಕ್ಕಬಳ್ಳಾಪುರ | ಕೆರೆ | 214 | 12 | 265315 | 155 | 14581076 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 4 | ಕೋಲಾರ | ಕೆರೆ | 146 | 12 | 2078853 | 80 | 4056888 | 0 | 0 |
| | | ನದಿಭಾಗ | 3 | 0 | 0 | 0 | 0 | 3 | 48000 |
| | | ಜಲಾಶಯ | 2 | 0 | 0 | 0 | 0 | 1 | 156000 |
| 5 | ರಾಮನಗರ | ಕೆರೆ | 109 | 24 | 1333927 | 51 | 4425784 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 4 | 1 | 60896 | 0 | 0 | 1 | 1500 |
| 6 | ತುಮಕೂರು | ಕೆರೆ | 401 | 45 | 2379595 | 286 | 29164765 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 4 | 1 | 20512 | 0 | 0 | 1 | 69000 |
| 7 | ಾಮರಾಜನಗರ | ಕೆರೆ | 91 | 18 | 317318 | 45 | 1646473 | 0 | 0 |
| | | ನದಿಭಾಗ | 5 | 2 | 7448 | 0 | 0 | 1 | 16000 |
| | | ಜಲಾಶಯ | 3 | 3 | 165461 | 0 | 0 | 0 | 0 |
| 8 | ಹಾಸನ | ಕೆರೆ | 178 | 21 | 517415 | 133 | 9123425 | 0 | 0 |
| | | ನದಿಭಾಗ | 8 | 0 | 0 | 0 | 0 | 0 | 0 |
| | | ಜಲಾಶಯ | 3 | 0 | 0 | 0 | 0 | 0 | 0 |
| 9 | ಕೊಡಗು | ಕೆರೆ | 9 | 0 | 0 | 6 | 11761 | 0 | 0 |
| | | ನದಿಭಾಗ | 9 | 2 | 23646 | 0 | 0 | 7 | 19900 |
| | | ಜಲಾಶಯ | 2 | 0 | 0 | 1 | 287608 | 0 | 0 |
| 10 | ಮಂಡ್ಯ | ಕೆರೆ | 179 | 63 | 2678969 | 42 | 3806414 | 0 | 0 |
| | | ನದಿಭಾಗ | 26 | 9 | 32901 | 0 | 0 | 5 | 82355 |
| | | ಜಲಾಶಯ | 4 | 0 | 0 | 0 | 0 | 0 | 0 |
| 11 | ಮೈಸೂರು | ಕೆರೆ | 99 | 38 | 904628 | 35 | 2101894 | 0 | 0 |
| | | ನದಿಭಾಗ | 12 | 2 | 10228 | 0 | 0 | 0 | 0 |
| | | ಜಲಾಶಯ | 3 | 1 | 1057838 | 0 | 0 | 0 | 0 |
| 12 | ಿಕ್ಕಮಗಳೂರು | ಕೆರೆ | 128 | 13 | 178637 | 81 | 1052357 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 2 | 0 | 0 | 0 | 0 | 0 | 0 |
| 13 | ಚಿತ್ರದುರ್ಗ | ಕೆರೆ | 169 | 1 | 159646 | 100 | 14055802 | 0 | 0 |
| | | ನದಿಭಾಗ | 3 | 0 | 0 | 0 | 0 | 0 | 0 |
| | | ಜಲಾಶಯ | 3 | 0 | 0 | 0 | 0 | 0 | 0 |
| 14 | ದಾವಣಗೆರೆ | ಕೆರೆ | 94 | 27 | 159453 | 50 | 2363697 | 0 | 0 |
| | | ನದಿಭಾಗ | 7 | 4 | 31012 | 0 | 0 | 0 | 0 |
| | | ಜಲಾಶಯ | 2 | 1 | 118056 | 0 | 0 | 1 | 207000 |
| 15 | ಶಿವಮೊಗ್ಗ | ಕೆರೆ | 446 | 21 | 173188 | 332 | 9829566 | 3 | 140272 |
| | | ನದಿಭಾಗ | 9 | 5 | 101798 | 0 | 0 | 2 | 141000 |
| | | ಜಲಾಶಯ | 9 | 0 | 0 | 0 | 0 | 4 | 201000 |

| | | | | | | | | | |
|---|---|---|---|---|---|---|---|---|---|
| 16 | ಬೀದರ್ | ಕೆರೆ | 92 | 22 | 267614 | 21 | 450412 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 3 | 2 | 181300 | 0 | 0 | 0 | 0 |
| 17 | ಕಲಬುರ್ಗಿ | ಕೆರೆ | 82 | 31 | 633872 | 25 | 778883 | 0 | 0 |
| | | ನದಿಭಾಗ | 11 | 0 | 0 | 0 | 0 | 0 | 0 |
| | | ಜಲಾಶಯ | 6 | 3 | 657875 | 0 | 0 | 0 | 0 |
| 18 | ರಾಯಚೂರು | ಕೆರೆ | 80 | 8 | 658610 | 20 | 671195 | 1 | 33000 |
| | | ನದಿಭಾಗ | 9 | 6 | 78064 | 0 | 0 | 0 | 0 |
| | | ಜಲಾಶಯ | 3 | 1 | 887721 | 2 | 168734 | 0 | 0 |
| 19 | ಯಾದಗಿರಿ | ಕೆರೆ | 74 | 11 | 606048 | 44 | 1734844 | 0 | 0 |
| | | ನದಿಭಾಗ | 16 | 6 | 38100 | 0 | 0 | 0 | 0 |
| | | ಜಲಾಶಯ | 2 | 0 | 0 | 1 | 36206 | 0 | 0 |
| 20 | ಬಳ್ಳಾರಿ | ಕೆರೆ | 100 | 18 | 404743 | 40 | 4000060 | 0 | 0 |
| | | ನದಿಭಾಗ | 2 | 0 | 0 | 0 | 0 | 0 | 0 |
| | | ಜಲಾಶಯ | 4 | 1 | 167885 | 0 | 0 | 1 | 21000 |
| 21 | ಕೊಪ್ಪಳ | ಕೆರೆ | 52 | 19 | 348562 | 28 | 1245985 | 1 | 52500 |
| | | ನದಿಭಾಗ | 4 | 4 | 26797 | 0 | 0 | 0 | 0 |
| | | ಜಲಾಶಯ | 5 | 0 | 0 | 0 | 0 | 0 | 0 |
| 22 | ಉಡುಪಿ | ಕೆರೆ | 7 | 0 | 0 | 3 | 563554 | 1 | 93000 |
| | | ನದಿಭಾಗ | 0 | 0 | 0 | 5 | 179123 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 23 | ಉತ್ತರಕನ್ನಡ | ಕೆರೆ | 86 | 11 | 115833 | 44 | 559863 | 0 | 0 |
| | | ನದಿಭಾಗ | 14 | 2 | 19050 | 0 | 0 | 0 | 0 |
| | | ಜಲಾಶಯ | 8 | 0 | 0 | 0 | 0 | 1 | 8000 |
| 24 | ಬೆಳಗಾವಿ | ಕೆರೆ | 221 | 28 | 166161 | 78 | 955524 | 1 | 39000 |
| | | ನದಿಭಾಗ | 7 | 0 | 0 | 0 | 0 | 0 | 0 |
| | | ಜಲಾಶಯ | 5 | 0 | 0 | 0 | 0 | 0 | 0 |
| 25 | ಬಾಗಲಕೋಟೆ | ಕೆರೆ | 47 | 18 | 194722 | 21 | 557865 | 0 | 0 |
| | | ನದಿಭಾಗ | 6 | 5 | 36499 | 0 | 0 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 26 | ಧಾರವಾಡ | ಕೆರೆ | 128 | 10 | 81384 | 110 | 2902372 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 1 | 0 | 0 | 0 | 0 | 0 | 0 |
| 27 | ಗದಗ | ಕೆರೆ | 32 | 8 | 147370 | 8 | 102778 | 0 | 0 |
| | | ನದಿಭಾಗ | 0 | 0 | 0 | 0 | 0 | 0 | 0 |
| | | ಜಲಾಶಯ | 0 | 0 | 0 | 0 | 0 | 0 | 0 |
| 28 | ಹಾವೇರಿ | ಕೆರೆ | 203 | 28 | 320722 | 137 | 4347478 | 0 | 0 |
| | | ನದಿಭಾಗ | 19 | 5 | 26238 | 0 | 0 | 0 | 0 |
| | | ಜಲಾಶಯ | 1 | 1 | 48996 | 0 | 0 | 0 | 0 |
| 29 | ವಿಜಯಪುರ | ಕೆರೆ | 160 | 17 | 265729 | 60 | 1810369 | 0 | 0 |
| | | ನದಿಭಾಗ | 8 | 0 | 0 | 0 | 0 | 0 | 0 |
| | | ಜಲಾಶಯ | 2 | 0 | 0 | 0 | 0 | 0 | 0 |
| ಒಟ್ಟು | | | **4192** | **668** | **20987383** | **2192** | **136007765** | **37** | **1976527** |

ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

## ಅನುಬಂಧ-4

## ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ಗುತ್ತಿಗೆ ಮುಖಾಂತರ ವಿಲೇವಾರಿ ಮಾಡುವ ಸಂಬಂಧ ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿ ವಿಧಾನಗಳು ಮತ್ತು ಮಾರ್ಗಸೂಚಿಗಳು

1. ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪ್ರತಿ ಮೀನುಗಾರಿಕೆ ಫಸಲಿ ವರ್ಷದ ಮೇ ತಿಂಗಳ **ಮೊದಲನೇ ವಾರದಲ್ಲಿ** ತಮ್ಮ ವ್ಯಾಪ್ತಿಗೆ ಬರುವ ಜಲಸಂಪನ್ಮೂಲಗಳ ಪೈಕಿ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡಲು ಲಭ್ಯವಿರುವ ಎಲ್ಲಾ ಜಲಸಂಪನ್ಮೂಲಗಳ ಪಟ್ಟಿಯನ್ನು (ನವೀಕರಿಸಿಕೊಳ್ಳದ ಕೆರೆಗಳೂ ಸೇರಿದಂತೆ) ತಯಾರು ಮಾಡಿ ಗುತ್ತಿಗೆಗೆ ಮೀನುಗಾರರ ಸಹಕಾರ ಸಂಘಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಈ ಆದೇಶದ ಅನುಬಂಧ-8ರಲ್ಲಿರುವ ನಿಗದಿತ ನಮೂನೆಯಲ್ಲಿ ಪ್ರಕಟಣೆಯನ್ನು ಹೊರಡಿಸತಕ್ಕದ್ದು. ಮತ್ತು ಈ ಬಗ್ಗೆ ಸಂಕ್ಷಿಪ್ತವಾಗಿ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಿಸುವುದು ಹಾಗೂ ಪ್ರಕಟಣೆಯ ಪ್ರತಿಗಳನ್ನು ಕೆರೆಯ ವ್ಯಾಪ್ತಿಯ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ, ತಾಲ್ಲೂಕಿನ ತಹಶೀಲ್ದಾರರ ಕಛೇರಿಯ ಮತ್ತು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ ಕಛೇರಿಯ ಜಾಹೀರಾತು ಫಲಕಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು. ಪ್ರಕಟಣೆಯ ಪ್ರತಿಯನ್ನು ತಾಲ್ಲೂಕಿನಲ್ಲಿ ನೋಂದಾಯಿಸಿಕೊಂಡಿರುವ ಎಲ್ಲಾ ಮೀನುಗಾರರ ಸಹಕಾರ ಸಂಘಗಳಿಗೆ "ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್" ಮುಖಾಂತರ ಕಡ್ಡಾಯವಾಗಿ ರವಾನಿಸುವುದು ಅಥವಾ ಮುದ್ದಾಂ ಮೂಲಕ ನೀಡಿ ಸ್ವೀಕೃತಿಯನ್ನು ಪಡೆಯತಕ್ಕದ್ದು. ಇಂತಹ ಪ್ರಕಟಣೆಯ ಪ್ರತಿಯೊಂದನ್ನು ಪ್ರಕಟಿಸಿದ ಕೂಡಲೇ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಈ ಆದೇಶದ ಅನುಬಂಧ-9ರಲ್ಲಿನ ನಿಗದಿತ ನಮೂನೆಯಲ್ಲಿ ಗುತ್ತಿಗೆಯನ್ನು ಕೋರಿ ಬರುವ ಅರ್ಜಿಗಳನ್ನು ಸ್ವೀಕರಿಸಲು ಮೇ 3ನೇ ವಾರ ಅಂತಿಮ ಗಡುವು ನೀಡತಕ್ಕದ್ದು (ಕನಿಷ್ಠ 20 ದಿನಗಳು)

2. ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಅರ್ಜಿ ಸಲ್ಲಿಸುವ ಮೀನುಗಾರರ ಸಹಕಾರ ಸಂಘಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ ಗರಿಷ್ಠ ಎರಡು ಕೆರೆ ಅಥವಾ ಒಂದು ಜಲಾಶಯದ (ಈ ಆದೇಶದ ಅನುಬಂಧ-2ರಂತೆ)(300 ಹೆಕ್ಟೇರ್ ಜಲವಿಸ್ತೀರ್ಣದ ಮಿತಿಗೊಳಪಟ್ಟಂತೆ) ಅಥವಾ ಎರಡು ನದಿ ಭಾಗದ ಮೀನು ಪಾಶುವಾರು ಹಕ್ಕನ್ನು ಮಾತ್ರ ಪಡೆಯಲು ಅರ್ಹತೆಯನ್ನು ಹೊಂದಿರುತ್ತವೆ. ಹಾಗೂ ಸದರಿ ಸಂಘವು ಈ ಆದೇಶದ ಅನುಬಂಧ-1ರಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು.

10



3. ಕೆರೆಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಕೋರಿರುವ ಮೀನುಗಾರರ ಸಹಕಾರ ಸಂಘ ಈ ಆದೇಶದ <u>ಅನುಬಂಧ-1</u>ರಲ್ಲಿ ನಮೂದಿಸಿರುವಂತೆ ಅರ್ಹತೆಗಳಿದ್ದಲ್ಲಿ ಹಾಗೂ ದಾಖಲಾತಿಗಳನ್ನು ಸಲ್ಲಿಸಿದ್ದಲ್ಲಿ ಅರ್ಜಿಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿ, ಅರ್ಜಿಗಳು, ಗುತ್ತಿಗೆ ಮೊತ್ತ, ಭದ್ರತಾ ಠೇವಣಿ ಮೊತ್ತದ ಹುಂಡಿಗಳು ಮತ್ತು ಎಲ್ಲಾ ದಾಸ್ತಾವೇಜುಗಳೊಡನೆ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಸ್ಪಷ್ಟವಾದ ವರದಿಯನ್ನು ತಯಾರು ಮಾಡಿ ಪೂರ್ಣ ಮಾಹಿತಿಗಳೊಂದಿಗೆ ಸೂಕ್ತ ಪ್ರಸ್ತಾವನೆಯನ್ನು (ಈ ಆದೇಶದ <u>ಅನುಬಂಧ-18</u>ರಲ್ಲಿನ ಚೆಕ್‌ಲಿಸ್ಟ್‌ನೊಂದಿಗೆ) <u>ಆ ವರ್ಷದ ಮೇ ತಿಂಗಳಿನ 31ನೇ ತಾರೀಖಿನೊಳಗಾಗಿ ಮೇಲಾಧಿಕಾರಿಗೆ ಸಲ್ಲಿಸತಕ್ಕದ್ದು.</u> ಮೊದಲನೇ ವರ್ಷದ ಗುತ್ತಿಗೆ ಹಣ ಮತ್ತು ಭದ್ರತಾ ಠೇವಣಿಯನ್ನು ಅರ್ಜಿ ಸಲ್ಲಿಸಿದ ಎಲ್ಲಾ ಸಂಘಗಳಿಂದ / ಸಂಸ್ಥೆಗಳಿಂದ ಮುಂಗಡವಾಗಿ ನಗದು ಹುಂಡಿ (ಡಿ.ಡಿ.) ಮುಖಾಂತರ ಸ್ವೀಕರಿಸಿ ಕೈ ರಸೀದಿಯನ್ನು ನೀಡತಕ್ಕದ್ದು. ಕೈ ರಸೀದಿಯ ಮೇಲೆ "<u>ಗುತ್ತಿಗೆಯು ಮೇಲಾಧಿಕಾರಿಗಳ ದೃಢೀಕರಣಕ್ಕೆ ಒಳಪಟ್ಟಿದೆ</u>" ಎಂದು ನಮೂದಿಸತಕ್ಕದ್ದು. ಗುತ್ತಿಗೆ ಆದೇಶ ಬಂದನಂತರ, ಯಶಸ್ವಿಯಾಗದ ಸಂಘಗಳ ನಗದು ಹುಂಡಿಯನ್ನು ನಿಯಮಾನುಸಾರ ಅವರಿಂದ ಸ್ವೀಕೃತಿ ಪಡೆದು ಹಿಂದಿರುಗಿಸತಕ್ಕದ್ದು.

4. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಅಂತಿಮ ದಿನದೊಳಗೆ <u>ಈ ಕೆಳಗೆ ಪಟ್ಟಿ ಮಾಡಿರುವ ದಾಖಲಾತಿಗಳನ್ನು ಸಲ್ಲಿಸದ ಸಹಕಾರ ಸಂಘದ ಅರ್ಜಿಯನ್ನು ತಾಲ್ಲೂಕು ಮೀನುಗಾರಿಕಾ ಅಧಿಕಾರಿಯು ತಿರಸ್ಕರಿಸುವುದು</u>. ತಿರಸ್ಕರಿಸಿದ ಬಗ್ಗೆ ಕಾರಣಗಳನ್ನು ಪಟ್ಟಿ ಮಾಡಿ ಅರ್ಜಿದಾರ ಸಹಕಾರ ಸಂಘಕ್ಕೆ ಲಿಖಿತ ಹಿಂಬರಹ ನೀಡುವುದು.

ಅ) ಕರ್ನಾಟಕ ಸಹಕಾರಿ ಕಾಯ್ದೆಯನ್ವಯ ನಿಯಮಾನುಸಾರ ಆಡಳಿತ ಮಂಡಳಿಯ ಸಭೆಗಳನ್ನು ಮತ್ತು ಚುನಾವಣೆಯನ್ನು ನಡೆಸಿರಬೇಕು ಹಾಗೂ ಆಡಳಿತ ಮಂಡಳಿ ರಚನೆಯಾಗಿರುವ ಬಗ್ಗೆ ದಾಖಲಾತಿಗಳು.

ಆ) ಸಂಘದ ಕಳೆದ 5 ವರ್ಷಗಳ ಅವಧಿಯಲ್ಲಿ ಯಾವುದಾದರೂ 3 ವರ್ಷಗಳ ಲೆಕ್ಕ ಪರಿಶೋಧನಾ ವರದಿ (ಸಹಕಾರಿ ಇಲಾಖೆ ನಡೆಸಿದ) ಮತ್ತು ಅವುಗಳ ಅನುಪಾಲನಾ ವರದಿ.

ಇ) ಸಂಘದ ಆರ್ಥಿಕ ಸ್ಥಿತಿಯನ್ನು ದೃಢೀಕರಿಸಲು ಸಂಘದ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ದೃಢೀಕೃತ ಪ್ರತಿ.

ಈ) ಗುತ್ತಿಗೆ ಮೊತ್ತ + ಠೇವಣಿ ಮೊತ್ತದ ನಗದು ಹುಂಡಿ.

ಉ) ಮೀನುಗಾರರ ಸಹಕಾರ ಸಂಘದ ನೋಂದಣಿ ಪತ್ರ, ಬೈಲಾ ಪ್ರತಿ ಮತ್ತು ಗುತ್ತಿಗೆಯನ್ನು ಕೋರಿರುವ ಆಡಳಿತ ಮಂಡಳಿಯ ನೋಟರೀಕರಿಸಿದ ಠರಾವು ಪ್ರತಿ.

5. ಗುತ್ತಿಗೆ ಕೋರಿ ಬಂದ ಪ್ರಸ್ತಾವನೆಗಳನ್ನು ಅವರ ಕಛೇರಿಯಲ್ಲಿ ಸ್ವೀಕರಿಸಿದ ಒಂದು ವಾರದೊಳಗಾಗಿ ಜಿಲ್ಲಾ ಮೀನುಗಾರಿಕಾ ಅಧಿಕಾರಿಗಳು ಮತ್ತು ವಲಯ ಮಟ್ಟದ ಮೀನುಗಾರಿಕಾ ಅಧಿಕಾರಿಗಳು ಅವರ ಅಧಿಕಾರ ವ್ಯಾಪ್ತಿಯಲ್ಲಿ ಗುತ್ತಿಗೆ ಆದೇಶವನ್ನು ಹೊರಡಿಸುವುದು. ಅವರ ಅಧಿಕಾರ ವ್ಯಾಪ್ತಿ ಮೀರಿದ ಪ್ರಸ್ತಾವನೆಗಳನ್ನು ಅವರ ಕಛೇರಿಗೆ ತಲುಪಿದ ಒಂದು ವಾರದೊಳಗಾಗಿ ಅವರ ಮೇಲಾಧಿಕಾರಿಗಳಿಗೆ ರವಾನಿಸತಕ್ಕದ್ದು. ಪ್ರಾರಂಭದಲ್ಲೇ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಬೇಕು. ಅಪೂರ್ಣ ಅರ್ಜಿಗಳೊಡನೆ ಪ್ರಸ್ತಾವನೆ ಸಲ್ಲಿಸಿದ ತಾಲ್ಲೂಕು ಮೀನುಗಾರಿಕಾ ಅಧಿಕಾರಿಯ ಮೇಲೆ ಕರ್ತವ್ಯ ನಿರ್ಲಕ್ಷತೆಯ ಬಗ್ಗೆ ಶಿಸ್ತು ಕ್ರಮ ಜರುಗಿಸುವುದು.

6. ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ನೀಡಿದ 5 ವರ್ಷಗಳ ಗುತ್ತಿಗೆ ಅವಧಿಯಲ್ಲಿ ಎರಡನೇ ವರ್ಷದಿಂದ ಪ್ರತೀ ವರ್ಷ ಗುತ್ತಿಗೆಯನ್ನು ನವೀಕರಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗೆ ನೀಡಲಾಗಿದೆ. ನವೀಕರಿಸುವ ಮುನ್ನಾ ಗುತ್ತಿಗೆದಾರರು ಗುತ್ತಿಗೆಯ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಿರುವ ಬಗ್ಗೆ ದಾಖಲಾತಿಗಳೊಡನೆ ದೃಢೀಕರಿಸಿಕೊಳ್ಳಬೇಕು. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಪ್ರತೀ ವರ್ಷ ಪೂರ್ಣ ಗುತ್ತಿಗೆ ಮೊತ್ತವನ್ನು ಮೀನುಗಾರಿಕೆ ಫಸಲಿ ವರ್ಷ ಅಂತ್ಯವಾಗುವ ಮೊದಲೇ ಅಂದರೆ ಏಪ್ರಿಲ್ 30ರೊಳಗಾಗಿ ಪಾವತಿ ಮಾಡಿ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು. ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಗುತ್ತಿಗೆದಾರರಿಗೆ ಗುತ್ತಿಗೆ ಮೊತ್ತದ ಬೇಡಿಕೆ ನೋಟೀಸ್‌ನ್ನು "ನೋಂದಣಿ ಅಂಚೆ ಸ್ವೀಕೃತಿ ಬಾಕಿ" ಮುಖಾಂತರ ತಾಲ್ಲೂಕು ಮೀನುಗಾರಿಕಾ ಅಧಿಕಾರಿಯು ರವಾನಿಸುವುದು. ಈ ನೋಟೀಸ್ ನೀಡಿದ ನಂತರವೂ ಸಹ ಗುತ್ತಿಗೆದಾರರು ಗುತ್ತಿಗೆ ಮೊತ್ತವನ್ನು ನಿಗದಿತ ವೇಳೆಯೊಳಗಾಗಿ ಪಾವತಿಸದಿದ್ದಲ್ಲಿ ಹಾಗೂ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ಆದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಗುತ್ತಿಗೆ ಆದೇಶ ನೀಡಿದ ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ. ಗುತ್ತಿಗೆ ರದ್ದುಪಡಿಸಿದ ನಂತರ ಮರುವಿಲೇಗೊಳಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿದೆ.

7. ಜಲಸಂಪನ್ಮೂಲದ ಒಟ್ಟು ಜಲವಿಸ್ತೀರ್ಣದ ಶೇಕಡ 50ರಷ್ಟು ಜಲವಿಸ್ತೀರ್ಣವನ್ನು ಉಪಯುಕ್ತತಾ ಜಲವಿಸ್ತೀರ್ಣ ಪ್ರದೇಶವೆಂದು ಗಣನೆಗೆ ತೆಗೆದುಕೊಂಡು, ಈ ರೀತಿ ಗಣನೆಗೆ ತೆಗೆದುಕೊಂಡ ಜಲವಿಸ್ತೀರ್ಣಕ್ಕೆ ಪ್ರತಿ ಹೆಕ್ಟೇರಿಗೆ ರೂ.500-00ರಂತೆ ಬರುವ ಮೊತ್ತ ಅಥವಾ ಹಿಂದಿನ ಮೂರು ವರ್ಷಗಳ ಸರಾಸರಿ ಆದಾಯ ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು ಪ್ರಥಮ ವರ್ಷದ ಗುತ್ತಿಗೆ ಮೊತ್ತವೆಂದು ನಿಗಧಿಪಡಿಸುವುದು. ಈ ರೀತಿ ನಿಗದಿಪಡಿಸಿದ ಗುತ್ತಿಗೆ ಮೊತ್ತಕ್ಕೆ ಉಳಿದ ನಾಲ್ಕು ವರ್ಷಗಳ ಗುತ್ತಿಗೆ ಅವಧಿಯಲ್ಲಿ ಪ್ರತಿ ವರ್ಷ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇಕಡ 5ರಂತೆ ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದು.

8. ಗುತ್ತಿಗೆದಾರರು ಜಲಸಂಪನ್ಮೂಲದ <u>ಗುತ್ತಿಗೆ ಮೊತ್ತದ ಶೇಕಡ 25ರಷ್ಟು ಹಣವನ್ನು ಭದ್ರತಾ ಠೇವಣಿಯಾಗಿ</u> ಮೊದಲನೆಯ ವರ್ಷದ ಗುತ್ತಿಗೆ ಮೊತ್ತದೊಂದಿಗೆ ಡಿ.ಡಿ. ಮುಖಾಂತರ ಪಾವತಿಸತಕ್ಕದ್ದು. ಯಾವುದೇ ಷರತ್ತಿನ ಅಥವಾ ನಿಬಂಧನೆಯ ಉಲ್ಲಂಘನೆಯಾದಲ್ಲಿ ಸದರಿ ಭದ್ರತಾ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು. ಇಲ್ಲದಿದ್ದಲ್ಲಿ ಈ ಠೇವಣಿ ಹಣವನ್ನು ಬಡ್ಡಿರಹಿತವಾಗಿ ಗುತ್ತಿಗೆ ಅವಧಿಯು ಮುಗಿದ ನಂತರ ಗುತ್ತಿಗೆದಾರರಿಗೆ ಹಿಂದಿರುಗಿಸುವುದು.

9. ಗುತ್ತಿಗೆಗೆ ಪಡೆದ ಮೀನು ಪಾಶುವಾರು ಹಕ್ಕನ್ನು ಯಾವುದೇ ಕಾರಣಕ್ಕಾಗಿ <u>ವರ್ಗಾಯಿಸತಕ್ಕದ್ದಲ್ಲ. ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ.</u> ಒಂದು ಪಕ್ಷ ವರ್ಗಾಯಿಸಿದ್ದಲ್ಲಿ ಅಥವಾ ಉಪ ಗುತ್ತಿಗೆಗೆ ನೀಡಿರುವುದು ದಾಖಲೆಗಳಿಂದ ಧೃಡಪಟ್ಟಲ್ಲಿ ಗುತ್ತಿಗೆ ಆದೇಶವನ್ನು ನೀಡಿದ ಸಕ್ಷಮ ಪ್ರಾಧಿಕಾರ ರದ್ದುಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ.

10. ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲದಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿಯುಂಟಾದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಯು ಗುತ್ತಿಗೆ ಪಡೆದ ಗುತ್ತಿಗೆದಾರರ ಮೇಲೆ ಕ್ರಮವಹಿಸತಕ್ಕದ್ದು.

11. ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಡೈನಾಮೈಟ್, ವಿಷಮದ್ದು, ರಾಸಾಯನಿಕ ವಸ್ತು ಅಥವಾ ವಿಷದ ಪ್ರಯೋಗವನ್ನಾಗಲೀ ಮಾಡಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಗುತ್ತಿಗೆದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ರದ್ದುಪಡಿಸಿ ಅವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳತಕ್ಕದ್ದು. ಮತ್ತು ಈ ರೀತಿ ಅಕ್ರಮವಾಗಿ ಹಿಡಿದ ಮೀನನ್ನು ಮಾರಾಟ ಮಾಡಿ ಸರ್ಕಾರಕ್ಕೆ ಜಮಾ ಮಾಡಲು ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳು ಕ್ರಮ ಕೈಗೊಳ್ಳತಕ್ಕದ್ದು.

12. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಲಾಗಿರುವ ಯಾವುದೇ ನಿಯಮಗಳನ್ನು ಉಲ್ಲಂಘಿಸಿದ ಗುತ್ತಿಗೆದಾರರ ಗುತ್ತಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲು ಕ್ರಮವಹಿಸುವುದು. ಹಾಗೂ ಸರ್ಕಾರವು / ಮೀನುಗಾರಿಕೆ ಇಲಾಖೆಯು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು. ಈ ದಿಸೆಯಲ್ಲಿ ಈ ಆದೇಶದ <u>ಅನುಬಂಧ-10</u>ರಲ್ಲಿರುವ ನಿಗದಿತ ನಮೂನೆಯಲ್ಲಿರುವಂತೆ ಮುಚ್ಚಳಿಕೆ ಪತ್ರವನ್ನು ರೂ.200-00ರ ಮೌಲ್ಯದ ಛಾಪಾಕಾಗದದಲ್ಲಿ ಗುತ್ತಿಗೆದಾರರಿಂದ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪಡೆದುಕೊಳ್ಳತಕ್ಕದ್ದು.

13. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಮೀನುಗಾರರ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಮೀನುಗಾರಿಕೆ ಅಧಿಕಾರಿಗಳು ಪರಿಶೋಧನೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

14. ಗುತ್ತಿಗೆದಾರರು ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ <u>ಪ್ರತಿ ಹೆಕ್ಟೇರು ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಕನಿಷ್ಠ 2000 ಬಲಿತ ಬಿತ್ತನೆ ಮೀನುಮರಿಗಳನ್ನು</u> (70–80 ಎಂ.ಎಂ.) ಮೀನುಗಾರಿಕೆ ಇಲಾಖೆಯು ಅನುಮೋದಿಸಿದ ತಳಿಯ ಮೀನುಮರಿಗಳನ್ನು ಮಾತ್ರ ಮೀನುಗಾರಿಕೆ ಇಲಾಖೆಯ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳಿಂದ ಖರೀದಿಸಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ಅಧಿಕಾರಿಯ ಸಮ್ಮುಖದಲ್ಲಿ ಬಿತ್ತನೆ ಮಾಡತಕ್ಕದ್ದು. ಮೀನುಮರಿಗಳನ್ನು ಬಿತ್ತನೆ ಮಾಡಿರುವ ಬಗ್ಗೆ ಪ್ರತಿವರ್ಷ ಫೋಟೋ ದೃಢೀಕರಣವನ್ನು ತಾಲ್ಲೂಕು ಮಟ್ಟದ ಮೀನುಗಾರಿಕಾ ಅಧಿಕಾರಿಗಳಿಗೆ ನೀಡಬೇಕು.

15. ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆದ ಯಾವುದೇ ಗುತ್ತಿಗೆದಾರರು ನಿಷೇಧಿತ ಮೀನು ತಳಿಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್ ಫಿಶ್ (ಆಣೆ ಮೀನು), ಚೈನೀಸ್ ಬಿಗ್ ಹೆಡ್, ಮತ್ತು ಇತರೆ ನಿಷೇಧಿತ ಮೀನುಮರಿಗಳ ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ವ್ಯಾಪಾರ ಮಾಡುವುದು ಕಂಡುಬಂದಲ್ಲಿ ಅವರಿಗೆ ನೀಡಲಾದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸಿ ಆ ಸಾಲಿನ ಗುತ್ತಿಗೆ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದಲ್ಲದೇ ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.

(ಜಿ.ಜಯಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಅನುಬಂಧ - 3



ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

ಂಬರಹ ಸಂಖ್ಯೆ: DOF-TECHOALL2/110/2022, E-800611. ದಿನಾಂಕ: 05/07/2022

**ವಿಷಯ:** ರೈತ ಮೀನುಗಾರರ ಉತ್ಪಾದಕ ಸಂಸ್ಥೆ (FPOs)ಗಳಿಗೆ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ನೀಡುವ ಸಂಬಂಧ ಮಾರ್ಗಸೂಚಿ ಹೊರಡಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-104 ಮೀಇಇ 2022, ಬೆಂಗಳೂರು ದಿನಾಂಕ:02/07/2022.

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಆದೇಶದಂತೆ ಮೀನುಗಾರರ ಸಹಕಾರ ಸಂಘಗಳಿಗೆ ಗುತ್ತಿಗೆ ಆದೇಶ ನೀಡಿದ ನಂತರದ ಆದ್ಯತೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರ ಉತ್ಪಾದಕ ಸಂಸ್ಥೆ ( POs) ಗಳಿಗೆ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ನೀಡುವ ಸಂಬಂಧ ಮಾರ್ಗಸೂಚಿಗಳನ್ನು ಅನುಸರಿಸಲು ಆದೇಶಿಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಗುತ್ತಿಗೆ ಕಾರ್ಯನೀತಿ 2014 ರ ನಿಯಮಗಳಂತೆ ಹಾಗೂ ಈ ಉಲ್ಲೇಖಿತ ಪತ್ರದ ಆದೇಶದಂತೆ ನಿಯಮಾನುಸಾರ ಮೀನುಪಾಶುವಾರು ಹಕ್ಕು ವಿಲೇ ಮಾಡಲು ಸೂಚಿಸಿದೆ.

ಮುಂದುವರೆದಂತೆ 2022-23 ನೇ ಸಾಲಿನ ಮೀನುಗಾರಿಕೆ ಫಸಲಿ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಈ ಪತ್ರದೊಂದಿಗೆ ಲಗತ್ತಿಸಿರುವ ವೇಳಾ ಪಟ್ಟಿಯಂತೆ (ಅನುಬಂಧ-1) ಇಲಾಖಾ ಜಲ ಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿಲೇಗೊಳಿಸಲು ಸೂಚಿಸಲಾಗಿದೆ.

ಅಡಕ: ಮೇಲಿನಂತೆ

ಸಹಿ/-
ಮೀನುಗಾರಿಕೆ ನಿರ್ದೇಶಕರು

ಗೆ
ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ
ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ
ಪ್ರತಿಯನ್ನು ಮೀನುಗಾರಿಕೆ ಉಪ ನಿರ್ದೇಶಕರು, ಜಲಾಶಯ ಉಸ್ತುವಾರಿ ಅಧಿಕಾರಿಗಳು

ಮೀನುಗಾರಿಕೆ ನಿರ್ದೇಶಕರ ಪರವಾಗಿ

4352618

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs)ಗಳಿಗೆ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ನೀಡುವ ಸಂಬಂಧ ಮಾರ್ಗಸೂಚಿಗಳನ್ನು ಹೊರಡಿಸುವ ಬ

ಓದಲಾಗಿದೆ:- 1) ಸೇರ್ಪಡೆ ಸಂಖ್ಯೆ: ಪಸಂಮೀ/ಇ-104/ಮೀಇಇ/2022 ದಿನಾಂಕ: 08-06-2022.
2) ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ: DoF-TECHOALL2/110/2022, ದಿನಾಂಕ: 19-06-2022.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸೇರ್ಪಡೆಯಲ್ಲಿ ಒಳನಾಡು ಜಲಸಂಪನ್ಮೂಲಗಳ ವಿಲೇವಾರಿ ಕಾರ್ಯನೀತಿ-2014ರ ಆದೇಶ ಸಂಖ್ಯೆ: ಪಸಂ )ೀ 125 ಮೀಇಇ 2013, ದಿನಾಂಕ 21-02-2014ರ ಆದೇಶ ಭಾಗದ ಕಂಡಿಕೆ-4 ರ ವಿಲೇ )ರಿ ವಿಧಾನಗಳು 1) ಗುತ್ತಿಗೆ - (ಅ), (ಆ), (ಇ) ಮತ್ತು (ಈ) ಗಳ ಕಂಡಿಕೆಗಳಲ್ಲಿ ಮೀನುಗಾ ರರ ಸಹಕಾರಿ ಸಂಘಗಳು ಹಾಗೂ ಮೀನುಗಾರಿಕೆ ಸಹಕಾರ ಸಂಘಕ್ಕೆ ಎಂದು ಬ )ವ ಪದಗಳ ನಂತರ ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs)ಅನ್ನು ಸೇರ್ಪಡೆ ಮ )ಡಿ ಒದಿಕೊಳ್ಳಲು ಆದೇಶಿಸಲಾಗಿದೆ. ಈ ಸೇರ್ಪಡೆಯನ್ನು ಕರ್ನಾಟಕ ರೈತ ಉತ್ಪಾದ ಕರ ಸಂಸ್ಥೆಗಳ ಕಾರ್ಯನೀತಿ-2018ರ ಕ್ರ.ಸಂ.8 ಅನುಷ್ಠಾನ ಮಾರ್ಗೋಪಾಯಗಳ ನ 8.4.2ರನ್ವಯ ಪರಿಗಣಿಸಲಾಗಿದೆ ಎಂದು ಸೇರ್ಪಡೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲ ಖೆ ಇವರ ಏಕ ಕಡತ ಪತ್ರದಲ್ಲಿ, ಒಳನಾಡು ಜಲಸಂಪನ್ಮೂಲಗಳ ವಿಲೇವಾ )ರಿ ಕಾರ್ಯನೀತಿ-2014ರ ಆದೇಶದ ಅನುಬಂಧ-1 ರಲ್ಲಿ ಮೀನುಗಾರರ ಸಹಕಾ )ರ ಸಂಘಗಳು ಒಳನಾಡು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿ )ಗೆ ಪಡೆಯಲು ಇರಬೇಕಾದ ಅರ್ಹತೆಗಳು ಮತ್ತು ಸಲ್ಲಿಸಬೇಕಾದ ದಾಖಲಾತಿಗಳ ಒ ಗ್ಗೆ ವಿವರಿಸಲಾಗಿದ್ದು, ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸೇರ್ಪಡೆಯ ತ್ತೆ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಮೂಲಕ ಮೀನುಗಾ )ರ ಸಹಕಾರ ಸಂಘಗಳ ನಂತರದ ಆದ್ಯತೆಯಲ್ಲಿ ರೈತ ಮೀನುಗಾರ ಉತ್ಪಾದಕ ಸಂ ಸ್ಥೆ (FPOs) ಗಳಿಗೆ ನೀಡುವ ಸಂದರ್ಭದಲ್ಲಿ ಒಳನಾಡು ಮೀನುಗಾರಿಕೆ ಕಾರ್ಯನೀತಿ 2( 14 ರಂತೆ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಪಡೆಯುವ ಸಂದರ್ಭದ ಲ್ಲಿ ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs) ಗಳಿಗೆ ಇರಬೇಕಾದ ಅರ್ಹತೆಗಳು ಮ ತ್ತು ಸಲ್ಲಿಸಬೇಕಾದ ದಾಖಲಾತಿಗಳು, ಕಾರ್ಯವ್ಯಾಪ್ತಿ, ವಿಲೇವಾರಿ ವಿಧಾನಗಳ ಒ ಗ್ಗೆ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-104 ಮೀಇಇ 2022, ಬೆಂಗಳೂರು ದಿನಾಂಕ: 02-07-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸಂಖ್ಯೆ: ಪಸಂಮೀ/ಇ-104/ಮೀಇಇ/2022 ದಿನಾಂಕ: 08-06-2022 ರ ಸೇರ್ಪಡೆ ಆದೇಶದಂತೆ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಮೂಲಕ ಮೀನುಗಾರರ ಸಹಕಾರ ಸಂಘಗಳಿಗೆ ನೀಡಿದ ನಂತರದ ಆದ್ಯತೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs)ಗಳಿಗೆ ನೀಡುವ ಸಂದರ್ಭದಲ್ಲಿ ಈ ಆದೇಶದ <u>ಅನುಬಂಧ-1</u> ರಲ್ಲಿ ನಮೂದಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A. 2/7/2022
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)
02.7.2022

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಈ ಆದೇಶವನ್ನು ಮುದ್ರಿಸಿ ಅದರ ೧೦೦೦ ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಿದೆ.

**ಪ್ರತಿಗಳು:**

1) ಮಹಾಲೇಖಪಾಲರು (ಲೆ ಮತ್ತು ಇ)(ಎಯು-1)/(ಎಯು-2), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ/ನಗರಾಭಿವೃದ್ಧಿ ಇಲಾಖೆ/ಇಂಧನ ಇಲಾಖೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
5) ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
6) ಎಲ್ಲಾ ಜಿಲ್ಲಾಧಿಕಾರಿಗಳಿಗೆ (ಮೀನುಗಾರಿಕೆ ನಿರ್ದೇಶಕರ ಮುಖಾಂತರ).
7) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಮೀನುಗಾರಿಕೆ ನಿರ್ದೇಶಕರ ಮುಖಾಂತರ).
8) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.

17



10) ನಿರ್ದೇಶಕರು, ಪೌರಾಡಳಿತ ಇಲಾಖೆ, ಬೆಂಗಳೂರು.
11) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.
12) ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬೆಂಗಳೂರು.
13) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಬೆಂಗಳೂರು.
14) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಮೀನುಗಾರಿಕ ಮಹಾಮಂಡಳಿ ನಿ., ನಂ.1226/1, ಭಾವಸಂಪದ, ನ್ಯೂ ಕಾಂತರಾಜ್ ಅರಸು ರಸ್ತೆ, ಬಲ್ಲಾಳವೃತ್ತದ ಬಳಿ, ಕೃಷ್ಣಮೂರ್ತಿಪುರಂ, ಮೈಸೂರು-570004.
15) ಕಾರ್ಯಕಾರಿ ನಿರ್ದೇಶಕರು, ಜಲಸಂವರ್ಧನ ಯೋಜನಾ ಸಂಘ, ನಂ.42, 5ನೇ ಅಡ್ಡರಸ್ತೆ, ಆರ್.ಎಂ.ವಿ. ಎಕ್ಸ್‌ಟೆನ್ಷನ್, ಸದಾಶಿವನಗರ, ಬೆಂಗಳೂರು - 560 080
16) ಮೀನುಗಾರಿಕೆ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ, ಮೀನುಗಾರಿಕೆ ನಿರ್ದೇಶಕರ ಮುಖಾಂತರ.
17) ಸಂಬಂಧಪಟ್ಟವರುಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
18) ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
19) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

ಪ್ರತಿಯನ್ನು:

1. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರ ಮಾಹಿತಿಗಾಗಿ.

14) ವ್ಯವಸ್ಥಾಪಕ ನಿರ್ದೇಶಕರು [illegible] ಮೀನುಗಾರಿಕ [illegible] ಮೈಸೂರು 570004
[illegible]
19) ಶಾಖಾ ರಕ್ಷಾ [illegible]
ಪ್ರತಿಯನ್ನು:
1. [illegible]
[illegible] ಬೆಂಗಳೂರು
14) [illegible]

ಆದೇಶ ಸಂಖ್ಯೆ: ಪಸಂಮೀ ಇ-104 ಮೀಇಇ 2022, ಬೆಂಗಳೂರು ದಿನಾಂಕ: 02-07-2022ರ

## ಅನುಬಂಧ-1

## ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರರ ಉತ್ಪಾದಕ ಸಂಸ್ಥೆ (FPOs) ಗಳಿಗೆ ಮೀನು ಪಾಶುವಾರು ಹಕ್ಕನ್ನು ನೀಡಲು ಅನುಸರಿಸಬೇಕಾದ ಮಾರ್ಗಸೂಚಿಗಳು

ಕಾರ್ಯವ್ಯಾಪ್ತಿ:- ಒಳನಾಡು ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳು (FPOs) ನೋಂದಣಿಯಾಗಿರುವ ಅಧಿಕೃತ ವಿಳಾಸದನುಸಾರ ಸ್ಥಳೀಯ / ತಾಲ್ಲೂಕು ಮಟ್ಟದ / ಜಿಲ್ಲಾ ಮಟ್ಟದ ಕಾರ್ಯವ್ಯಾಪ್ತಿ ಎಂದು ಪರಿಗಣಿಸತಕ್ಕದ್ದು.

### ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs)ಗಳಿಗೆ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡುವ ಸಂದರ್ಭದಲ್ಲಿ ಇರಬೇಕಾದ ಅರ್ಹತೆಗಳು / ಸಲ್ಲಿಸಬೇಕಾದ ದಾಖಲೆಗಳು.

1) ಗುತ್ತಿಗೆ ಕೋರಿರುವ ರೈತ ಮೀನುಗಾರ ಉತ್ಪಾದಕ ಸಂಸ್ಥೆಯು (FPOs), ಹಾಲಿ ಕಾರ್ಯನಿರ್ವಹಿಸುತ್ತಿರಬೇಕು ಹಾಗೂ ಕಂಪನಿ ಕಾಯ್ದೆಯನ್ವಯ ನಿಯಮಾನುಸಾರ ನಿರ್ದೇಶಕರ ಮಂಡಳಿಯ ಸಭೆಗಳನ್ನು ಮತ್ತು ಮಹಾಸಭೆಗಳನ್ನು ನಡೆಸಿರಬೇಕು.

2) ಗುತ್ತಿಗೆ ಕೋರಿರುವ ಜಲಸಂಪನ್ಮೂಲವು ರೈತ ಮೀನುಗಾರ ಉತ್ಪಾದಕ ಸಂಸ್ಥೆಯ (FPOs) ಕಾರ್ಯವ್ಯಾಪ್ತಿಯಲ್ಲಿರಬೇಕು.

3) ಕಂಪನಿ ಕಾಯ್ದೆಯನ್ವಯ ಸಂಸ್ಥೆಯು ಚುನಾವಣೆಯನ್ನು ನಡೆಸಿರಬೇಕು ಮತ್ತು ನಿರ್ದೇಶಕರ ಮಂಡಳಿ ರಚನೆಯಾಗಿರಬೇಕು.

4) ಸಂಸ್ಥೆಯು ಕಳೆದ 5 ವರ್ಷಗಳ ಅವಧಿಯಲ್ಲಿ ಯಾವುದಾದರೂ 3 ವರ್ಷಗಳ ಲೆಕ್ಕ ಪರಿಶೋಧನಾ ವರದಿಯನ್ನು ಚಾರ್ಟೆಡ್ ಅಕೌಂಟೆಂಟ್ ರವರು ನಡೆಸಿದ ಮತ್ತು ಅವುಗಳ ಅನುಪಾಲನಾ ವರದಿಯನ್ನು ಸಲ್ಲಿಸಬೇಕು. ಆದರೆ, FPOs ಗಳು 3 ವರ್ಷಗಳ ಅವಧಿಯೊಳಗೆ ಇದ್ದಲ್ಲಿ, 2 ವರ್ಷಗಳ ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸಬೇಕು.

5) ಈ ಹಿಂದೆ ಸಂಸ್ಥೆಯು ಕೆರೆಗಳನ್ನು ಗುತ್ತಿಗೆಗೆ ಪಡೆದಿದ್ದಲ್ಲಿ ಹಿಂದಿನ 5 ವರ್ಷಗಳ ಅವಧಿಯಲ್ಲಿ ಕನಿಷ್ಠ 2 ವರ್ಷಗಳಲ್ಲಿ ಸಂಸ್ಥೆಯು ಲಾಭದಲ್ಲಿರಬೇಕು. ನಷ್ಟದಲ್ಲಿರುವ ಸಂಸ್ಥೆಯು ಗುತ್ತಿಗೆ ಪಡೆಯಲು ಅನರ್ಹವಾಗುತ್ತದೆ. ಆದರೆ, ಮೊದಲನೇ ಬಾರಿಗೆ ಅರ್ಜಿ ಸಲ್ಲಿಸುವ FPOs ಗಳಿಗೆ ಇದು ಅನ್ವಯಿಸುವುದಿಲ್ಲ.

6) ಸಂಸ್ಥೆಯು ಗುತ್ತಿಗೆಗೆ ಕೋರುತ್ತಿರುವ ಜಲಸಂಪನ್ಮೂಲದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತ ಜಲವಿಸ್ತೀರ್ಣಕ್ಕೆ ಕನಿಷ್ಠ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಬಿತ್ತನೆ ಮಾಡಲು/ಖರೀದಿಸಲು ಬೇಕಾದ ಮೊತ್ತ ಮತ್ತು ಕೆರೆಯ ಗುತ್ತಿಗೆ ಮೊತ್ತ ಮತ್ತು ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಲು ಬೇಕಾದ ಮೊತ್ತವು ಅದರ ಬ್ಯಾಂಕ್ ಖಾತೆಯಲ್ಲಿರಬೇಕು. ಆರ್ಥಿಕ ಸ್ಥಿತಿಯನ್ನು ದೃಢೀಕರಿಸಲು ಸಂಸ್ಥೆಯ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ದೃಢೀಕೃತ ಪ್ರತಿ ಸಲ್ಲಿಸಬೇಕು.

7) ಸಂಸ್ಥೆಯ ನೋಂದಣಿ ಪತ್ರ, ಬೈಲಾ ಪ್ರತಿ, ಸಂಸ್ಥೆಯ ನಿರ್ದೇಶಕರ ಮಂಡಳಿ ಸದಸ್ಯರ ಪಟ್ಟಿ, ಈ ಹಿಂದೆ ಗುತ್ತಿಗಗ ಪಡೆದಿದ್ದ ಜಲಸಂಪನ್ಮೂಲದಲ್ಲಿ ಬಿತ್ತನೆ ಮಾಡಲಾದ ಮೀನುಮರಿಗಳು, ಹಿಡುವಳಿ ಮಾಡಲಾದ ಪ್ರಮಾಣ ಮತ್ತು ಗಳಿಸಿದ ಆದಾಯದ ವಿವರಗಳನ್ನು (ಅನ್ವಯಿಸಿದ್ದಲ್ಲಿ) ಸಲ್ಲಿಸಬೇಕು. ಜಲಸಂಪನ್ಮೂಲದ ಗುತ್ತಿಗೆ ಮೊತ್ತವನ್ನು ಮತ್ತು ಠೇವಣಿ ಮೊತ್ತವನ್ನು ಮುಂಗಡವಾಗಿ ಡಿ.ಡಿ. ಮುಖಾಂತರ ಪಾವತಿಸಬೇಕು.

8) ಸಂಸ್ಥೆಯಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ವಿವರ ಸಲ್ಲಿಸಬೇಕು. ಸಾಲ ಮತ್ತು ಷೇರು ಬಂಡವಾಳ ಇತ್ಯಾದಿ) ನಷ್ಟದಲ್ಲಿರುವ ಸಂಸ್ಥೆ ಗುತ್ತಿಗೆಯನ್ನು ಪಡೆಯಲು ಅನರ್ಹವಾಗುತ್ತದೆ.

9) ಸಂಸ್ಥೆಯು ಜಲಸಂಪನ್ಮೂಲದ ಗುತ್ತಿಗೆಯನ್ನು ಕೋರಿರುವ ನಿರ್ದೇಶಕರ ಮಂಡಳಿಯ ನಡವಳಿಯ (ಠರಾವು) ನೋಟರೀಕರಿಸಿದ ಪ್ರತಿಯನ್ನು ಸಲ್ಲಿಸಬೇಕು.

10) ಸರ್ಕಾರವು ಗುತ್ತಿಗೆ ಮಾರ್ಗಸೂಚಿಗಳಿಗ ಸಂಬಂಧಿಸಿದಂತೆ ಆಗಿಂದಾಗ್ಗೆ ಹೊರಡಿಸುವ ಷರತ್ತು/ನಿಬಂಧನೆಗಳಿಗೆ ರೈತ ಮೀನುಗಾರ ಉತ್ಪಾದಕ ಸಂಸ್ಥೆಯು (FPOs) ಬದ್ಧರಾಗಿರತಕ್ಕದ್ದು.

<u>ವಿಲೇವಾರಿ ವಿಧಾನ</u>

1. ಜಲಸಂಪನ್ಮೂಲಗಳನ್ನು ಮೊದಲು ಅರ್ಹ ಮೀನುಗಾರರ ಸಹಕಾರ ಸಂಘಗಳಿಂದ / ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs) ಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಗರಿಷ್ಠ 5 ವರ್ಷಗಳ ಅವಧಿಗ ಗುತ್ತಿಗಗ ನೀಡಲಾಗುವುದು. ಅರ್ಹ ಮೀನುಗಾರರ ಸಹಕಾರ ಸಂಘಗಳು ಇಲ್ಲದಿದ್ದ ಪಕ್ಷದಲ್ಲಿ ನಂತರದ ಆದ್ಯತೆಯನ್ನು ಅರ್ಜಿ ಸಲ್ಲಿಸಿರುವ ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳಿಗೆ (FPOs) ನೀಡಲಾಗುವುದು. ಇಂತಹ ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳು (FPOs) <u>ಅನುಬಂಧ-1</u> ರಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರಬೇಕು ಮತ್ತು ಅದರಂತೆ ದಾಖಲೆಗಳನ್ನು ಸಲ್ಲಿಸಬೇಕು.

2. ಪ್ರತಿ ಅರ್ಹ ಸಂಸ್ಥೆಗೆ, ಆ ಸಂಸ್ಥೆಯ ಕಾರ್ಯವ್ಯಾಪ್ತಿಯಲ್ಲಿ (ಮೇಲೆ ಹೇಳಲಾದ) ಗರಿಷ್ಠ 300 ಹೆಕ್ಟೇರ್ ಜಲವಿಸ್ತೀರ್ಣಕ್ಕೆ ಮೀರದಂತೆ ಗರಿಷ್ಠ ಮೂರು ಕೆರೆ ಅಥವಾ ಗುತ್ತಿಗೆ ಕಾರ್ಯನೀತಿ-2014 ರ ಆದೇಶದ **ಅನುಬಂಧ-2** ರಲ್ಲಿ ಪಟ್ಟಿ ಮಾಡಿರುವ ಗರಿಷ್ಠ ಒಂದು ಜಲಾಶಯದ ಅಥವಾ ಗರಿಷ್ಠ ಮೂರು ನದಿ ಭಾಗ ಮಾತ್ರ ಗುತ್ತಿಗೆಗೆ ನೀಡುವುದು. (300 ಹೆ. ಜಲವಿಸ್ತೀರ್ಣ ಮೀರಿದ ಜಲ ಸಂಪನ್ಮೂಲಗಳಿದ್ದ ಸಂದರ್ಭದಲ್ಲಿ ಕೇವಲ ಒಂದು ಜಲಸಂಪನ್ಮೂಲದ ಮೀನು ಪಾಶುಪಾರು ಹಕ್ಕನ್ನು ಮಾತ್ರ ಗುತ್ತಿಗೆ ಪಡೆಯಲು ಸದರಿ ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs) ಅರ್ಹತೆಯನ್ನು ಹೊಂದಿರುತ್ತದೆ).

3. ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳು (FPOs) ಅಧಿಕೃತ ವಿಳಾಸನುಸಾರ ನೋಂದಣಿಯಾದ ಸ್ಥಳದಲ್ಲಿ ಮತ್ತು ಸಂಘದ ಅಧಿಕ ಸಂಖ್ಯೆಯ ಸದಸ್ಯರು ವಾಸ ಇರುವ ಪ್ರದೇಶದಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅರ್ಹವಾಗಿರುತ್ತವೆ.

4. ಒಂದೇ ಆದ್ಯತೆಯಲ್ಲಿ ಬರುವ ಒಂದಕ್ಕಿಂತ ಹೆಚ್ಚಿನ ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳು (FPOs) ಒಂದೇ ಜಲಸಂಪನ್ಮೂಲಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ, ಅರ್ಜಿ ಸಲ್ಲಿಸಿರುವ ಅರ್ಹ ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳ (FPOs) ನಡುವೆ ಮಾತ್ರ ಹರಾಜು ನಡೆಸಿ ವಿಲೇವಾರಿ ಮಾಡುವುದು.

Kamakshi U A
(ಕಾಮಾಕ್ಷಿ ಯು.ಎ.) 21/7/2022
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
21.7.2022 (ಮೀನುಗಾರಿಕೆ)

## ಅನುಬಂಧ-1

ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇ ಸಂಬಂಧ ಸರ್ಕಾರದ ಆದೇಶ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-104 ಮೀಇಇ 2022, ಬೆಂಗಳೂರು ದಿನಾಂಕ: 02/07/2022ರ ಅನ್ವಯ ಹಾಗೂ ಮೀನುಗಾರಿಕೆ ನಿರ್ದೇಶನಾಲಯದ ಸು.ಪ್ರೋಲೆ ಸಂಖ್ಯೆ.TECHOALL2/110/2022, ದಿನಾಂಕ:19-06-2022ರ ಮುಂದುವರಿಕೆಯಾಗಿ 2022-23ನೇ ಸಾಲಿಗೆ ಮಾತ್ರ ಸೀಮಿತವಾದ ವೇಳಾ ಪಟ್ಟಿ.

| ಕ್ರಮ ಸಂಖ್ಯೆ | ಮೀನು ಪಾಶುವಾರು ಹಕ್ಕಿನ ವಿಲೇ ಪ್ರಕ್ರಿಯೆ | ಪ್ರಕ್ರಿಯೆ ಪೂರ್ಣಗೊಳಿಸಬೇಕಾಗಿರುವ ಸಮಯ |
|---|---|---|
| 1 | ಅ) ಅರ್ಹ ಮೀನುಗಾರರ ಸಹಕಾರ ಸಂಘ / ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs) ಗಳಿಗೆ ನೇರ ಗುತ್ತಿಗೆ ಮೂಲಕ ವಿಲೇವಾರಿ | ಜುಲೈ 30 ರೊಳಗೆ |
| 2 | ಕಂಡಿಕೆ 01 ರಂತೆ ನೇರಗುತ್ತಿಗೆ ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ಪ್ರಥಮ (1ನೇ) ಸುತ್ತಿನ ಇ-ಟೆಂಡರ್ ಮೂಲಕ ವಿಲೇ | ಆಗಸ್ಟ್- ಸೆಪ್ಟೆಂಬರ್ |
| 3 | ಕಂಡಿಕೆ 02 ರಂತೆ ಟೆಂಡರ್-ಕಂ-ಹರಾಜು ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ದ್ವಿತೀಯ (2ನೇ) ಸುತ್ತಿನ ಇ-ಟೆಂಡರ್ ಮೂಲಕ ವಿಲೇ | ಅಕ್ಟೋಬರ್-ನವಂಬರ್ |
| 4 | ಕಂಡಿಕೆ 03 ರಂತೆ ಟೆಂಡರ್ ಕಂ ಹರಾಜು ಮೂಲಕ ವಿಲೇಯಾಗದ ಬಾಕಿ ಜಲಸಂಪನ್ಮೂಲಗಳ ತೃತೀಯ (3ನೇ) ಸುತ್ತಿನ ಇ-ಟೆಂಡರ್ ಮೂಲಕ ವಿಲೇ | ಡಿಸಂಬರ್ |
| 5 | ಮೇಲ್ಕಂಡ ಕಂಡಿಕೆ 01 ರಿಂದ 04ರವರೆಗೆ ಯಾವ ಪ್ರಕ್ರಿಯೆಯಲ್ಲಿಯೂ ವಿಲೇ ಆಗದ ಜಲಸಂಪನ್ಮೂಲಗಳ ವಿಲೇ ವಿನಾಯ್ತಿ ಪಡೆಯುವ ಅವಧಿ | ಜನವರಿ 2023 ಮಾಹೆಯ ಅಂತ್ಯದೊಳಗೆ |
| 6 | ಜಲಾಶಯಗಳ ಮತ್ತು ನದಿ ಭಾಗಗಳಲ್ಲಿ ಮೀನು ಪಾಶವಾರು ಹಕ್ಕುನ್ನು ಪರವಾನಗಿ ಮೂಲಕ ವಿಲೇ ಮಾಡುವುದು | ಸರ್ಕಾರ ಆದೇಶ ಸಂಖ್ಯೆ: ಪಸಂಮೀ ಇ-104 ಮೀಇಇ 2022, ಬೆಂಗಳೂರು ದಿನಾಂಕ: 02/07/2022ರ ಅನ್ವಯ ವಿಲೇಗೊಳಿಸುವುದು ಹಾಗೂ ಯಾವುದೇ ಬದಲಾವಣೆ ಇರುವುದಿಲ್ಲ. |

ಸಹಿ/-
ಮೀನುಗಾರಿಕೆ ನಿರ್ದೇಶಕರು

ಮೀನುಗಾರಿಕೆ ನಿರ್ದೇಶಕರ ಪರವಾಗಿ

## ಆದೇಶ ಸಂಖ್ಯೆ:ಪಸಂಮೀ 125 ಮೀಇಇ 2013, ಬೆಂಗಳೂರು ದಿನಾಂಕ:21-02-2014ರ

## ಅನುಬಂಧ-5

### ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯಿಂದ ಟೆಂಡರ್-ಕಂ-ಹರಾಜು ಮುಖಾಂತರ ವಿಲೇವಾರಿ ಮಾಡುವಾಗ ಮೀನುಗಾರಿಕೆ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿ ವಿಧಾನಗಳು ಮತ್ತು ಮಾರ್ಗಸೂಚಿಗಳು

ಎಲ್ಲೆಲ್ಲಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಆಪ್ಯತೆಯಲ್ಲಿನ ಮೀನುಗಾರರ ಸಹಕಾರ ಸಂಘಗಳು ಮುಂದೆ ಬರುವುದಿಲ್ಲವೋ ಆ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡಲು ಟೆಂಡರ್ ಮತ್ತು ಹರಾಜು ಪ್ರಕಟಣೆಯನ್ನು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಹೊರಡಿಸತಕ್ಕದ್ದು. ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಉದ್ದೇಶಿಸಲಾದ ಒಳನಾಡು ಜಲಸಂಪನ್ಮೂಲಗಳ ಟೆಂಡರ್ / ಹರಾಜು ಪ್ರಕಟಣೆಗಳನ್ನು ಈ ಆದೇಶದ ಅನುಬಂಧ-12ರಲ್ಲಿನಂತೆ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಪ್ರಕಟಣೆಯ ಕರಪತ್ರಗಳನ್ನು ಕೆರೆಯ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್, ತಾಲ್ಲೂಕಿನ ತಹಶೀಲ್ದಾರವರ ಕಛೇರಿಯ ಮತ್ತು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ ಕಛೇರಿಯ ಜಾಹೀರಾತು ಫಲಕಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು. ಟೆಂಡರ್ ಪ್ರಕಟಣೆಯನ್ನು ಕೆರೆಯ ವ್ಯಾಪ್ತಿಯ ಗ್ರಾಮ/ಗ್ರಾಮಗಳಲ್ಲಿ ಸಾರ್ವಜನಿಕರಿಗೆ ವ್ಯಾಪಕವಾಗಿ ಹರಾಜು ಇಸ್ತಿಹಾರ್ ಹಂಚಿಸುವ ಹಾಗೂ ಟಾಮ್ ಟಾಮ್ ಮಾಡಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಬೇಕು.

ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಟೆಂಡರ್-ಕಂ-ಹರಾಜು ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ 15 ದಿನಗಳ ಕಾಲಾವಕಾಶ ನೀಡಿ ಟೆಂಡರ್-ಕಂ-ಹರಾಜನ್ನು ನಡೆಸತಕ್ಕದ್ದು. ನೀರು ತುಂಬಿದ ಒಳನಾಡು ಜಲಸಂಪನ್ಮೂಲಗಳ ಸರ್ವೇಕ್ಷಣೆ ನಡೆಸಿ ಅವುಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯನ್ನು ಮೂರು ಸುತ್ತಿನಲ್ಲಿ ನಡೆಸತಕ್ಕದ್ದು. ಪೂರ್ಣವಾಗಿ ಅಥವಾ ಅರ್ಧಕ್ಕಿಂತ ಹೆಚ್ಚು ತುಂಬಿದ ಕೆರೆಗಳನ್ನು ಮೊದಲನೇ ಸುತ್ತಿನಲ್ಲಿ ಅಂದರೆ ಮೀನುಗಾರಿಕೆ ಫಸಲಿ ವರ್ಷದ ಮೇ-ಜೂನ್ ತಿಂಗಳಿನಲ್ಲಿ, ಎರಡನೇ ಸುತ್ತನ್ನು ಜುಲೈ-ಆಗಸ್ಟ್ ತಿಂಗಳಿನಲ್ಲಿ ಮತ್ತು ಮೂರನೇ ಹಾಗೂ ಅಂತಿಮ ಸುತ್ತನ್ನು ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ನಡೆಸತಕ್ಕದ್ದು. 3ನೇ ಸುತ್ತಿನ ನಂತರ ವಿಲೇವಾರಿಯಾಗದ ಕೆರೆಗಳ ಪಟ್ಟಿಯನ್ನು ತಯಾರು ಮಾಡಿ ವಿಲೇವಾರಿಯಿಂದ ವಿನಾಯಿತಿ ಆದೇಶವನ್ನು ಮೀನುಗಾರಿಕೆ ನಿರ್ದೇಶಕರಿಂದ ಪಡೆಯಲು ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆಯನ್ನು ಈ ಆದೇಶದ ಅನುಬಂಧ-7ರ ನಮೂನೆಯಲ್ಲಿ ಸಲ್ಲಿಸತಕ್ಕದ್ದು. ಎಲ್ಲಾ ಜಲಸಂಪನ್ಮೂಲಗಳ ವಿಲೇವಾರಿ ಪ್ರಕ್ರಿಯೆಯನ್ನು ಮೀನುಗಾರಿಕೆ ಫಸಲಿ ವರ್ಷ ಪ್ರಾರಂಭವಾದ 4 ತಿಂಗಳೊಳಗಾಗಿ ಅಂದರೆ ಮೀನುಗಾರಿಕೆ ಫಸಲಿ ವರ್ಷದ ಅಕ್ಟೋಬರ್ ಮಾಹೆಯ ಅಂತ್ಯದೊಳಗಾಗಿ ಕಡ್ಡಾಯವಾಗಿ ಪೂರ್ಣಗೊಳಿಸತಕ್ಕದ್ದು.

3. ಟೆಂಡರ್-ಕಂ-ಹರಾಜಿನ ಮೂಲಕ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ಇಚ್ಛಿಸುವವರು ಈ ಆದೇಶದ ಅನುಬಂಧ-13ರಲ್ಲಿನಂತೆ ಅಧಿಕೃತ ಟೆಂಡರ್ ಅರ್ಜಿ ನಮೂನೆಯನ್ನು ಸಂಬಂಧಪಟ್ಟ ತಾಲ್ಲೂಕಿನ ಮೀನುಗಾರಿಕೆ ಅಧಿಕಾರಿಯವರಿಂದ ಕಛೇರಿ ವೇಳೆಯಲ್ಲಿ ಅರ್ಜಿಯ ಶುಲ್ಕ ರೂ.100-00ನ್ನು (ರೂಪಾಯಿ ಒಂದು ನೂರು ಮಾತ್ರ) ಪಾವತಿಸಿ ಪಡೆದುಕೊಳ್ಳತಕ್ಕದ್ದು.

4. ಟೆಂಡರ್ ಹಾಗೂ ಹರಾಜಿನಲ್ಲಿ ಭಾಗವಹಿಸುವವರು ಮೀನುಗಾರಿಕೆ ಇಲಾಖೆಯು ನಿಗದಿಪಡಿಸಿದ ಭದ್ರತಾ ಠೇವಣಿಯನ್ನು ನಗದು ಹುಂಡಿ (ಡಿ.ಡಿ.) ಮೂಲಕ ಮಾತ್ರ ಪಾವತಿಸಿ ಟೆಂಡರ್ ಹಾಗೂ ಹರಾಜಿನಲ್ಲಿ ಭಾಗವಹಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಿರುವವರೂ ಸಹ ಭದ್ರತಾ ಠೇವಣಿ ಮೊತ್ತವನ್ನು ಮತ್ತೆ ಪಾವತಿಸದೆ ಹರಾಜಿನಲ್ಲಿ ಭಾಗವಹಿಸಬಹುದು. ಆದರೆ, ಟೆಂಡರ್‌ನಲ್ಲಿ ಭಾಗವಹಿಸದೆ ಬರೀ ಹರಾಜಿನಲ್ಲಿ ಭಾಗವಹಿಸುವವರು, ಹರಾಜು ಪ್ರಕ್ರಿಯೆ ಪ್ರಾರಂಭದ ಮುನ್ನ ಭದ್ರತಾ ಠೇವಣಿ ಮೊತ್ತವನ್ನು ನಗದುಹುಂಡಿ ಮೂಲಕ ಮಾತ್ರ ಪಾವತಿಸಿ ಭಾಗವಹಿಸಬಹುದು. ಈ ಭದ್ರತಾ ಠೇವಣಿ ಮೊತ್ತವನ್ನು ಆಯಾ ಜಲಸಂಪನ್ಮೂಲದ ಉಪಯುಕ್ತತಾ ಜಲವಿಸ್ತೀರ್ಣದ ಶೇ.15ರಷ್ಟು ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರಿಗೆ ರೂ.500.00ರಂತೆ (ರೂಪಾಯಿ ಐನೂರು ಮಾತ್ರ) ನಿಗದಿಪಡಿಸತಕ್ಕದ್ದು. ಯಶಸ್ವಿ ಬಿಡ್‌ದಾರರ ಭದ್ರತಾ ಠೇವಣಿ ಮೊತ್ತವನ್ನು ಬಡ್ಡಿರಹಿತವಾಗಿ ಗುತ್ತಿಗೆಯ ಅವಧಿಯು ಮುಗಿದನಂತರ ಅವರಿಗೆ ರೀಫಂಡ್ ಬಿಲ್ ಮುಖಾಂತರ ಮರುಪಾವತಿಸತಕ್ಕದ್ದು. ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಗುತ್ತಿಗೆ ಮೊತ್ತ ಪಾವತಿಸದಿದ್ದಲ್ಲಿ ಅಥವಾ ಗುತ್ತಿಗೆ ಅವಧಿಯಲ್ಲಿ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅವರ ಭದ್ರತಾ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಯಶಸ್ವಿಯಾಗದ ಟೆಂಡರ್‌ದಾರರ/ಬಿಡ್‌ದಾರರ ಠೇವಣಿ ಮೊತ್ತದ ನಗದು ಹುಂಡಿಗಳನ್ನು ಅವರಿಗೆ ಅಂದೇ ಹಿಂದಿರುಗಿಸಿ ಸ್ವೀಕೃತಿ ಪಡೆದುಕೊಳ್ಳುವುದು.

5. ಮೀನು ಪಾಶುವಾರು ಹಕ್ಕನ್ನು ಪಡೆಯಲು ಟೆಂಡರ್ ಅರ್ಜಿ ಸಲ್ಲಿಸುವವರು ಈ ಆದೇಶದ ಅನುಬಂಧ-13ರಲ್ಲಿರುವ ನಿಗದಿತ ನಮೂನೆಯ ಟೆಂಡರ್ ಅರ್ಜಿಯನ್ನು ಹಾಗೂ ಭದ್ರತಾ ಠೇವಣಿಯ ನಗದು ಹುಂಡಿಯನ್ನು ಮೊಹರು ಮಾಡಿದ ಪ್ರತ್ಯೇಕ ಲಕೋಟೆಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗೆ ನಿಗದಿತ ದಿನಾಂಕದೊಳಗಾಗಿ ಕಛೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು. ಮೊಹರಾದ ಲಕೋಟೆಯ ಮೇಲೆ ಕೆರೆಯ ಹೆಸರಿನೊಂದಿಗೆ ಮೀನು ಪಾಶುವಾರು ಹಕ್ಕನ್ನು ಪಡೆಯಲು ಟೆಂಡರ್ ಅರ್ಜಿಯೆಂದು ದಪ್ಪ ಅಕ್ಷರಗಳಲ್ಲಿ ನಮೂದಿಸಿರತಕ್ಕದ್ದು.

6. **ಟೆಂಡರ್-ಕಂ-ಹರಾಜನ್ನು ನಡೆಸುವ ವಿಧಾನ:**

ಮೊದಲು ಕೆರೆವಾರು ಹರಾಜನ್ನು ನಡೆಸುವುದು. ನಂತರ ಕೆರೆವಾರು ಟೆಂಡರ್ ಅರ್ಜಿಗಳನ್ನು ತೆರೆಯುವುದು. ಆ ಕೆರೆಗೆ ಟೆಂಡರ್ ಅರ್ಜಿಗಳಲ್ಲಿ ನಮೂದಿಸಿರುವ ಅತಿ ಹೆಚ್ಚಿನ ಮೊತ್ತ ಅಥವಾ ಹರಾಜಿನಲ್ಲಿ ಸೂಚಿಸಿರುವ ಅತಿ ಹೆಚ್ಚಿನ ಬಿಡ್ ಮೊತ್ತ ಈ ಎರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ವಾರ್ಷಿಕ ಗುತ್ತಿಗೆ ಮೊತ್ತವೆಂದು ಪರಿಗಣಿಸತಕ್ಕದ್ದು.

7. **ಸರ್ಕಾರಿ ಸವಾಲು:**

ಸಂಬಂಧಿಸಿದ ಜಲಸಂಪನ್ಮೂಲದ ಹಿಂದಿನ ವರ್ಷದ ಆದಾಯದ ಶೇ.50ರಷ್ಟು ಮೊತ್ತವನ್ನು ಸರ್ಕಾರಿ ಸವಾಲು ಅಥವಾ ಕನಿಷ್ಠ ಬಿಡ್ ಮೊತ್ತವೆಂದು ಪರಿಗಣಿಸುವುದು. ಆಖೈರಾದ ಬಿಡ್ / ಟೆಂಡರ್ ಮೊತ್ತವು ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ ಅಂತಹ ಟೆಂಡರ್-ಕಂ-ಹರಾಜು ಪ್ರಕ್ರಿಯೆಯನ್ನು ತಾಲ್ಲೂಕು ಮೀನುಗಾರಿಕೆ ಅಧಿಕಾರಿಯೇ ರದ್ದುಗೊಳಿಸಿ ಮರುವಿಲೇವಾರಿಗೆ ಕ್ರಮ ಕೈಗೊಳ್ಳತಕ್ಕದ್ದು. 2ನೇ ಬಾರಿಯೂ ಸಹ ಆಖೈರಾದ ಬಿಡ್ ಮೊತ್ತ ಸರ್ಕಾರಿ ಸವಾಲಿಗಿಂತ ಕಡಿಮೆ ಇದ್ದಲ್ಲಿ ಟೆಂಡರ್/ಹರಾಜನ್ನು ರದ್ದುಗೊಳಿಸಿ 3ನೇ ಬಾರಿಗೆ ಮರುವಿಲೇಗೊಳಿಸುವುದು. 3ನೇ ಬಾರಿಗೆ ಆಖೈರಾದ ಬಿಡ್ /ಟೆಂಡರ್ ಮೊತ್ತವನ್ನು ಒಪ್ಪಿಕೊಳ್ಳುವುದು.

8. ಮೀನು ಪಾಶುವಾರು ಹಕ್ಕಿನ ಟೆಂಡರ್/ಹರಾಜು ಮುಗಿದ ಕೂಡಲೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಯಶಸ್ವಿ ಟೆಂಡರುದಾರರು/ಬಿಡ್ಡುದಾರರು ಪೂರ್ಣ ಬಿಡ್ ಮೊತ್ತವನ್ನು ಹರಾಜು ನಡೆದ ಸ್ಥಳದಲ್ಲಿಯೇ ಪಾವತಿ ಮಾಡಿ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯಿಂದ ಅಧಿಕೃತ ರಸೀದಿಯನ್ನು ಪಡೆದುಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದರಿ ಟೆಂಡರ್-ಕಂ-ಹರಾಜಿನ ಬಗ್ಗೆ ಅವರು ನೀಡಲಾಗಿದ್ದ ಭದ್ರತಾ ಠೇವಣಿಯ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಆದರೆ, ಆಖೈರಾದ ಗರಿಷ್ಠ ಬಿಡ್ ಮೊತ್ತವನ್ನು 2ನೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಟೆಂಡರ್‌ದಾರರು / ಬಿಡ್‌ದಾರರು ಪಾವತಿಸಲು ಒಪ್ಪಿದಲ್ಲಿ ಹಾಗೂ ಅವರು ಸದರಿ ಮೊತ್ತವನ್ನು ಸ್ಥಳದಲ್ಲೇ ಪಾವತಿಸಿದಲ್ಲಿ ಅವರ ಹೆಸರಿಗೆ ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ವಿಲೇಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮ ಕೈಗೊಳ್ಳತಕ್ಕದ್ದು. ಒಂದು ವೇಳೆ 2ನೇ ಅತೀ ಹೆಚ್ಚಿನ ಟೆಂಡರುದಾರರು/ಬಿಡ್‌ದಾರರು ಇದಕ್ಕೆ ಒಪ್ಪದಿದ್ದಲ್ಲಿ ಜಿಲ್ಲಾ ಮೀನುಗಾರಿಕಾ ಅಧಿಕಾರಿಯ ಅನುಮೋದನೆ ಪಡೆದು ಮರು ಟೆಂಡರ್-ಕಂ-ಹರಾಜು ಮೂಲಕ ಮರುವಿಲೇವಾರಿ ಗೊಳಿಸಲು ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಕ್ರಮಕೈಗೊಳ್ಳತಕ್ಕದ್ದು.

2/12

9. ಟೆಂಡರ್-ಕಂ-ಹರಾಜಿನ ಮುಖಾಂತರ ವಿಲೇಗೊಳಿಸಲಾದ ಮೀನು ಪಾಶುವಾರು ಹಕ್ಕಿನ ದೃಢೀಕರಣವು ಮೇಲಾಧಿಕಾರಿಗಳ ಅನುಮೋದನೆಗೆ ಒಳಪಟ್ಟಿರುತ್ತದೆ.

10. ಟೆಂಡರ್/ಹರಾಜು ಪ್ರಕ್ರಿಯೆ ಮುಗಿದ ಒಂದು ವಾರದೊಳಗಾಗಿ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯು ಹರಾಜು ದೃಢೀಕರಣ ಆದೇಶ ಪಡೆಯಲು ಎಲ್ಲಾ ದಾಖಲಾತಿಗಳೊಂದಿಗೆ ಸೂಕ್ತ ಪ್ರಸ್ತಾವನೆಯನ್ನು (ಈ ಆದೇಶದ ಅನುಬಂಧ-18ರಲ್ಲಿನ ಚೆಕ್‌ಲಿಸ್ಟ್‌ನೊಂದಿಗೆ) ಮೇಲಾಧಿಕಾರಿಗೆ ಸಲ್ಲಿಸತಕ್ಕದ್ದು. ಟೆಂಡರ್/ಹರಾಜು ದೃಢೀಕರಣ ಆದೇಶ ಕೋರಿ ಬಂದ ಪ್ರಸ್ತಾವನೆಗಳನ್ನು ಒಂದು ವಾರದೊಳಗಾಗಿ ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳು ಮತ್ತು ವಲಯ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಅವರ ಅಧಿಕಾರ ವ್ಯಾಪ್ತಿಯಲ್ಲಿ ಗುತ್ತಿಗೆ ಆದೇಶವನ್ನು ಹೊರಡಿಸುವುದು. ಅಧಿಕಾರ ವ್ಯಾಪ್ತಿ ಮೀರಿದ ಪ್ರಸ್ತಾವನೆಗಳನ್ನು ಅವರ ಕಛೇರಿಗೆ ತಲುಪಿದ ಒಂದು ವಾರದೊಳಗಾಗಿ ಅವರ ಮೇಲಾಧಿಕಾರಿಗೆ ಸಲ್ಲಿಸುವುದು. ಪ್ರಾರಂಭದಲ್ಲೇ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪ್ರಸ್ತಾವನೆಯೊಡನೆ ಸಲ್ಲಿಸಬೇಕಾದ ಎಲ್ಲಾ ದಾಖಲಾತಿಗಳು ಚೆಕ್‌ಲಿಸ್ಟ್‌ಗಳನ್ನು ಪರಿಶೀಲಿಸಿಕೊಂಡು ಪೂರ್ಣ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ಅಪೂರ್ಣ ಪ್ರಸ್ತಾವನೆ ಸಲ್ಲಿಸುವ ತಾಲ್ಲೂಕು ಮೀನುಗಾರಿಕೆ ಅಧಿಕಾರಿಯ ಮೇಲೆ ಕರ್ತವ್ಯ ನಿರ್ಲಕ್ಷತೆಯ ಆರೋಪ ಹೊರಿಸಿ ಶಿಸ್ತು ಕ್ರಮ ಜರುಗಿಸುವುದು.

11. ಟೆಂಡರ್-ಕಂ-ಹರಾಜು ಮುಖಾಂತರ ಪಡೆದ ಮೀನು ಪಾಶುವಾರು ಹಕ್ಕಿನ ಗುತ್ತಿಗೆ ಅವಧಿಯ 2ನೇ ವರ್ಷದಿಂದ ಪ್ರತಿವರ್ಷ ಗುತ್ತಿಗೆಯನ್ನು ನವೀಕರಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗೆ ಪ್ರತ್ಯಾಯೋಜಿಸಲಾಗಿದೆ. ಎರಡನೇ ವರ್ಷ ಮತ್ತು ತದನಂತರದ ವಾರ್ಷಿಕ ಟೆಂಡರ್/ಬಿಡ್ ಮೊತ್ತವನ್ನು ಬಿಡ್‌ದಾರರು ಮೀನುಗಾರಿಕೆ ಫಸಲಿ ವರ್ಷದ ಪ್ರಾರಂಭದ ಮುನ್ನ ಅಂದರೆ ಏಪ್ರಿಲ್ 30ರೊಳಗಾಗಿ ಪಾವತಿ ಮಾಡಿ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು. ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಬಿಡ್‌ದಾರರಿಗೆ ಬಿಡ್ ಮೊತ್ತದ ಬೇಡಿಕೆ ನೋಟೀಸನ್ನು "ನೋಂದಣಿ ಅಂಚೆ ಸ್ವೀಕೃತಿ ಬಾಕಿ" ಮುಖಾಂತರ ರವಾನಿಸುವುದು. ಈ ನೋಟೀಸ್ ನೀಡಿದ ನಂತರವೂ ಬಿಡ್‌ದಾರರು ನಿಗದಿತ ಅವಧಿಯೊಳಗಾಗಿ ಗುತ್ತಿಗೆ ಮೊತ್ತವನ್ನು ಪಾವತಿಸಿ ನವೀಕರಿಸಿಕೊಳ್ಳದಿದ್ದಲ್ಲಿ ಹಾಗೂ ಇಲಾಖಾ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ಅವರ ಹರಾಜು ದೃಢೀಕರಣ ಆದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಗುತ್ತಿಗೆ ದೃಢೀಕರಿಸಿದ ಸಕ್ಷಮ ಪ್ರಾಧಿಕಾರ / ಮೀನುಗಾರಿಕೆ ನಿರ್ದೇಶಕರು ಹೊಂದಿರುತ್ತಾರೆ. ಸದರಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮರುವಿಲೇವಾರಿಗೊಳಿಸುವ ಅಧಿಕಾರವನ್ನು ಜಿಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿದೆ. ಹಿಂದಿನ ಗುತ್ತಿಗೆ ಆದೇಶವನ್ನು ರದ್ದುಪಡಿಸಿದ ನಂತರವೇ ಹೊಸ ಗುತ್ತಿಗೆ ಆದೇಶವನ್ನು ಸಕ್ಷಮ ಪ್ರಾಧಿಕಾರ ನೀಡುವುದು.

12. ಟೆಂಡರ್-ಕಂ-ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಮೀನು ಪಾಶುವಾರು ಹಕ್ಕನ್ನು ಯಾವುದೇ ಕಾರಣಕ್ಕಾಗಿ ವರ್ಗಾಯಿಸತಕ್ಕದ್ದಲ್ಲ. ಹಾಗೂ ಉಪ ಗುತ್ತಿಗೆಗೆ ನೀಡತಕ್ಕದ್ದಲ್ಲ. ಒಂದು ಪಕ್ಷ ವರ್ಗಾಯಿಸಿದ್ದಲ್ಲಿ ಅಥವಾ ಉಪ ಗುತ್ತಿಗೆಗೆ ನೀಡಿರುವುದು ದಾಖಲೆಗಳಿಂದ ದೃಢಪಟ್ಟಲ್ಲಿ ಗುತ್ತಿಗೆ ಆದೇಶವನ್ನು ಸಕ್ಷಮ ಪ್ರಾಧಿಕಾರ ರದ್ದುಗೊಳಿಸುವುದು.

13. ಟೆಂಡರ್‌ದಾರರು/ಬಿಡ್‌ದಾರರು ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆದ ಜಲಸಂಪನ್ಮೂಲಗಳಲ್ಲಿ ಪ್ರತಿ ಹೆಕ್ಟೇರು ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಕನಿಷ್ಠ 2000 ಬಲಿತ ಮೀನುಮರಿಗಳನ್ನು (70–80 ಎಂ.ಎಂ.)(ಮೀನುಗಾರಿಕೆ ಇಲಾಖೆಯಿಂದ ಅನುಮೋದಿತ ತಳಿಯ) ಮಾತ್ರ ಮೀನುಗಾರಿಕೆ ಇಲಾಖೆಯ ಅಥವಾ ಮೀನುಗಾರಿಕೆ ಇಲಾಖೆಯಿಂದ ಅನುಮೋದಿಸಲ್ಪಟ್ಟ ಮೀನುಮರಿ ಉತ್ಪಾದನಾ / ಪಾಲನಾ ಕೇಂದ್ರಗಳಿಂದ ಖರೀದಿಸಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ಅಧಿಕಾರಿಯ ಸಮ್ಮುಖದಲ್ಲಿ ಬಿತ್ತನೆ ಮಾಡತಕ್ಕದ್ದು, ಬಿತ್ತನೆ ಮಾಡಿರುವ ಬಗ್ಗೆ ಪ್ರತಿವರ್ಷ ಫೋಟೋ ದೃಢೀಕರಣವನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ನೀಡತಕ್ಕದ್ದು.

14. ಯಾವುದೇ ಅಥವಾ ಎಲ್ಲಾ ಟೆಂಡರ್-ಕಂ-ಹರಾಜು ಪ್ರಸ್ತಾವನೆಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ / ಸರ್ಕಾರಕ್ಕೆ ಇರುತ್ತದೆ. ಯಾವುದೇ ಕಾರಣ ನೀಡದೆ ಟೆಂಡರ್ / ಹರಾಜನ್ನು ತಿರಸ್ಕರಿಸಿ ಮರು ಟೆಂಡರ್ / ಹರಾಜು ಮಾಡುವ ಹಕ್ಕು ಮೀನುಗಾರಿಕೆ ಇಲಾಖೆಗ ಸೇರಿರುತ್ತದೆ.

5. ಟೆಂಡರ್/ ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಜಲಸಂಪನ್ಮೂಲಗಳಲ್ಲಿ ಗುತ್ತಿಗೆದಾರರು ಡೈನಮೈಟ್, ಸಿಡಿಮದ್ದು, ವಿಷ ಅಥವಾ ರಾಸಾಯನಿಕ ವಸ್ತುಗಳನ್ನು ಪ್ರಯೋಗಿಸಿ ಮೀನು ಹಿಡಿಯತಕ್ಕದ್ದಲ್ಲ. ಈ ನಿಬಂಧನೆಯನ್ನು ಉಲ್ಲಂಘಿಸಿದ ಟೆಂಡರುದಾರರ / ಬಿಡ್ಡುದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ರದ್ದುಪಡಿಸಿ ಭದ್ರತಾ ಠೇವಣಿ ಮೊತ್ತ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

6. ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್ / ಹರಾಜು ಮುಖಾಂತರ ಗುತ್ತಿಗೆಗೆ ಪಡೆದ ಯಾವುದೇ ಟೆಂಡರುದಾರರು / ಬಿಡ್‌ದಾರರು ನಿಷೇಧಿತ ಮೀನುಗಳಾದ ಪ್ರಮುಖವಾಗಿ ಆಫ್ರಿಕನ್ ಕ್ಯಾಟ್‌ಫಿಶ್ (ಆಣೆ ಮೀನು), ಚೈನೀಸ್ ಬಿಗ್ ಹೆಡ್, ಇತ್ಯಾದಿಗಳನ್ನು ಬಿತ್ತನೆ ಮಾಡುವುದು ಅಥವಾ ಅಭಿವೃದ್ಧಿಪಡಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದಲ್ಲಿ ಅವರಿಗೆ ನೀಡಲಾಗಿದ್ದ ಗುತ್ತಿಗೆಯನ್ನು ಕೂಡಲೇ ರದ್ದುಪಡಿಸುವ ಮತ್ತು ಆ ಸಾಲಿನ ಗುತ್ತಿಗೆ ಮೊತ್ತ ಮತ್ತು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಮೀನುಗಾರಿಕೆ ಇಲಾಖೆ ಹೊಂದಿರುತ್ತದೆ. ಟೆಂಡರುದಾರರಿಂದ / ಬಿಡ್‌ದಾರರಿಂದ ಈ ನಿಷೇಧಿತ ಮೀನುಮರಿಗಳ ಅಭಿವೃದ್ಧಿ, ಪಾಲನೆ ಮತ್ತು ಮಾರಾಟ ಮಾಡುವುದು ಕಂಡುಬಂದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರ್ಪಡಿಸಿ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಯಾವುದೇ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಮುಂದಕ್ಕೆ ನೀಡಲಾಗುವುದಿಲ್ಲ.

17. ಟೆಂಡರುದಾರರು / ಗುತ್ತಿಗೆದಾರರು ಗುತ್ತಿಗೆ ಪಡೆದ ಜಲಸಂಪನ್ಮೂಲಗಳಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವಾಗ ಸದರಿ ಜಲಸಂಪನ್ಮೂಲದ ಕಟ್ಟೆ, ಏರಿ, ತೂಬು, ಮುಂತಾದವುಗಳಿಗೆ ಯಾವುದೇ ರೀತಿಯ ಹಾನಿ ಉಂಟಾಗದಂತೆ ನೋಡಿಕೊಳ್ಳತಕ್ಕದ್ದು. ಹಾನಿಯುಂಟಾದಲ್ಲಿ ಟೆಂಡರ್/ಬಿಡ್‌ದಾರರ ಮೇಲೆ ಕ್ರಮವಹಿಸತಕ್ಕದ್ದು.

18. ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿನ ಒಳನಾಡು ಜಲಸಂಪನ್ಮೂಲಗಳಲ್ಲಿನ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಲಾಗಿರುವ ಯಾವುದೇ ನಿಯಮವನ್ನು ಉಲ್ಲಂಘಿಸಿದ ಟೆಂಡರುದಾರರ / ಗುತ್ತಿದಾರರ ಗುತ್ತಿಗೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಸಕ್ಷಮ ಪ್ರಾಧಿಕಾರವು ರದ್ದುಪಡಿಸತಕ್ಕದ್ದು. ಹಾಗೂ ಸರ್ಕಾರವು / ಮೀನುಗಾರಿಕೆ ನಿರ್ದೇಶಕರು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಧಿಸಬಹುದಾದ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಗುತ್ತಿಗೆದಾರರು / ಟೆಂಡರುದಾರರು ಬದ್ಧರಾಗಿರತಕ್ಕದ್ದು. ಈ ದಿಶೆಯಲ್ಲಿ ಈ ಆದೇಶದ ಅನುಬಂಧ-15ರಲ್ಲಿನ ನಮೂನೆಯಲ್ಲಿರುವಂತೆ ಮುಚ್ಚಳಿಕೆ ಪತ್ರವನ್ನು ರೂ.200-00ರ ಮೌಲ್ಯದ ಛಾಪಾ ಕಾಗದದಲ್ಲಿ ಟೆಂಡರುದಾರರಿಂದ / ಗುತ್ತಿಗೆದಾರರಿಂದ ಸಂಬಂಧಪಟ್ಟ ತಾಲ್ಲೂಕು ಮೀನುಗಾರಿಕೆ ಅಧಿಕಾರಿಗಳು ಪಡೆದುಕೊಳ್ಳತಕ್ಕದ್ದು.

(ಜಿ.ಜಯಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ)

ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ: 080 - 2286 4681/4604 ಫ್ಯಾಕ್ಸ್: 080 - 2286 4619 ಇಮೇಲ್: dof-blr-ka@nic.in

**ಹಿಂಬರಹ ಸಂಖ್ಯೆ: DOF-TECHOALL2/94/2020, E-360662. ದಿನಾಂಕ: 21/06/2022.**

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-70 ಮೀಇಇ 2022, ದಿನಾಂಕ: 18/06 2022ನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಸರ್ಕಾರದ ಆದೇಶದಂತೆ ಕ್ರಮವಹಿಸಲು ತಿಳಿಸಲಾಗಿದೆ.

ಅಡಕ ಮೇಲಿನಂತೆ,

ಸಹಿ/-

ಮೀನುಗಾರಿಕೆ ನಿರ್ದೇಶಕರು.

ಗೆ:

ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳು,
ಎಲ್ಲಾ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ,
ಎಲ್ಲಾ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ,
ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ(1) ಸಂಕಲನಕ್ಕೆ ಮಾಹಿತಿಗಾಗಿ.
ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ (2) ದಾಸ್ತಾನು ಕಡತಕ್ಕೆ.
ಪ್ರತಿಯನ್ನು: ಮೀನುಗಾರಿಕೆ ಸಹಾಯವಾಣಿ ರವರಿಗೆ ಮಾಹಿತಿಗಾಗಿ.

ಮೀನುಗಾರಿಕೆ ನಿರ್ದೇಶಕರ ಪರವಾಗಿ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರಿಕೆ ಇಲಾಖೆ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೀನುಗಾರರಿಗೆ ಮೀಸಲಾತಿ ಕಲ್ಪಿಸುವ ಕುರಿತು

ಓದಲಾಗಿದೆ:- (1) ನಿರ್ದೇಶಕರು, ಎಸ್.ಸಿ.ಪಿ./ಟಿ.ಎಸ್.ಪಿ. ಕೋಶ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಕ ಇ/SCP-TSP ಕೋಶ/ ಸಿ.ಆರ್.-05/2020-21. ದಿನಾಂಕ: 24-09-2020

(2) ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ: DOF-TECHOALL (2)/94/2020, ದಿನಾಂಕ: 10-04-2021.

(3) ದಿನಾಂಕ:25.04.2022 ರಂದು ನಡೆದ ಸಭೆಯ ನಡವಳಿ.

******

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ನಿರ್ದೇಶಕರು. ಎಸ್.ಸಿ.ಪಿ./ಟಿ.ಎಸ್.ಪಿ. ಕೋಶ, ಇವರ ಪತ್ರದಲ್ಲಿ ಮೀನುಗಾರಿಕೆ ಇಲಾಖೆ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೀನುಗಾರರಿಗೆ ನಿಯಮಾನುಸಾರ ಕನಿಷ್ಟ ಶೇ 24.10 ರಷ್ಟು ಮೀಸಲಾತಿ ಕಲ್ಪಿಸಲು ಸೂಚಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ಮೀನುಗಾರರ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿದ ನಂತರ ಉಳಿದ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿ ಯುಕ್ತ ಸಮಿತಿಯನ್ನು ರಚಿಸುವಂತೆ ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ನಡವಳಿಯಲ್ಲಿ, ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ಮೀನುಗಾರರ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿದ ನಂತರ ಉಳಿದ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿಯುಕ್ತ ಸಮಿತಿಯನ್ನು ರಚಿಸಲು ನಿರ್ಣಯಿಸಲಾಗಿದೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಹಾಗೂ ದಿನಾಂಕ: 25-04-2022 ರಂದು ಸರ್ಕಾರದ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯಿಸಲಾದಂತೆ ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿಯುಕ್ತ ಸಮಿತಿಯನ್ನು ರಚಿಸಲು ಸರ್ಕಾರವು ತೀರ್ಮಾನಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-70 ಮೀಇಇ 2022, ಬೆಂಗಳೂರು ದಿನಾಂಕ: 18-06-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ಮೀನುಗಾರರ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿದ ನಂತರ ಉಳಿದ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲು ಆಯಾ ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೆಳಕಂಡ ಅಧಿಕಾರಿಯುಕ್ತ ಸಮಿತಿಯನ್ನು ರಚಿಸಲಾಗಿದೆ.

| ಕ್ರಮ ಸಂಖ್ಯೆ | ಪದನಾಮ | |
|---|---|---|
| 1) | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ | - ಅಧ್ಯಕ್ಷರು |
| 2) | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ - | - ಸದಸ್ಯರು |
| 3) | ಜಿಲ್ಲಾ ಪರಿಶಿಷ್ಟ ವರ್ಗದ ಕಲ್ಯಾಣಾಧಿಕಾರಿ | - ಸದಸ್ಯರು |
| 4) | ಜಿಲ್ಲಾ ಮೀನುಗಾರಿಕೆ ಉಪ ನಿರ್ದೇಶಕರು | - ಸದಸ್ಯ ಕಾರ್ಯದರ್ಶಿ |

ಮೇಲ್ಕಂಡ ಸಮಿತಿಯು ಮೀಸಲಾತಿ ಕಲ್ಪಿಸುವ ಸಂದರ್ಭದಲ್ಲಿ ಈ ಆದೇಶದ **ಅನುಬಂಧದಲ್ಲಿ** ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A. 18/6/2022
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.

# ಅನುಬಂಧ

## ಷರತ್ತು ಮತ್ತು ನಿಬಂಧನೆಗಳು

1) ಅಧಿಕಾರಯುಕ್ತ ಸಮಿತಿಯು ಜಿಲ್ಲೆಯಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಕಾರ್ಯನೀತಿ-2014 ರನ್ವಯ ನೇರ ಗುತ್ತಿಗೆ ಮುಖಾಂತರ ಅರ್ಹ ಮೀನುಗಾರರ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿದ ನಂತರ. ಉಳಿದ 100 ಹೆಕ್ಟೇರ್‌ವರೆಗಿನ ಜಲವಿಸ್ತೀರ್ಣದ ಜಲಸಂಪನ್ಮೂಲಗಳ ಪೈಕಿ ಶೇ.24.10 ಜಲಸಂಪನ್ಮೂಲಗಳನ್ನು ಸಂಬಂಧಪಟ್ಟ ತಾಲ್ಲೂಕಿನಲ್ಲಿ ಎಸ್.ಸಿ./ಎಸ್.ಟಿ. ಸಮುದಾಯವು ಹೆಚ್ಚಾಗಿ ವಾಸಿಸುವ / ಕ್ರೋಢೀಕೃತವಾಗಿರುವ ಪ್ರದೇಶದಲ್ಲಿ ಇರುವ ಕೆರೆಗಳನ್ನು ಆ ಸಮುದಾಯದವರಿಗೆ ನೀಡುವುದು. ಆ ಭಾಗದಲ್ಲಿ ಕೆರೆಗಳು ಲಭ್ಯವಿಲ್ಲದಿದ್ದಲ್ಲಿ ಬೇರೆ ಭಾಗದಲ್ಲಿ ಅವಕಾಶ ಕಲ್ಪಿಸುವುದು.

2) ಆಯ್ಕೆಯಾದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಕಾರ್ಯನೀತಿ-2014 ರನ್ವಯ ತಾಲ್ಲೂಕು ಮಟ್ಟದ ಅಧಿಕಾರಿಗಳು ಜಲಸಂಪನ್ಮೂಲಗಳ ತಾಲ್ಲೂಕಿನಲ್ಲಿ ವಾಸವಿರುವ ಪರಿಶಿಷ್ಟ ಜಾತಿ (ಶೇ.17.15) / ಪರಿಶಿಷ್ಟ ಪಂಗಡದ (ಶೇ.6.95) ಜನಾಂಗದವರಿಗೆ ಸೀಮಿತವಾಗಿರಿಸಿ ವಿಲೇವಾರಿ ಮಾಡಲು ಕ್ರಮ ವಹಿಸುವುದು. ಒಂದು ವೇಳೆ ಜಲಸಂಪನ್ಮೂಲದ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೀನುಗಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಇದ್ದಲ್ಲಿ, ಜಿಲ್ಲಾ ಮಟ್ಟದವರೆಗೆ ಅವಕಾಶ ಕಲ್ಪಿಸತಕ್ಕದ್ದು.

3) ತಾಲ್ಲೂಕಿನಲ್ಲಿ ಲಭ್ಯವಿರುವ 100 ಹೆಕ್ಟೇರ್ ಜಲವಿಸ್ತೀರ್ಣದವರೆಗಿನ ಕೆರೆಗಳ ಒಟ್ಟು ಜಲವಿಸ್ತೀರ್ಣದ ಕನಿಷ್ಠ ಶೇ.24.10ರಷ್ಟು ಪ್ರಮಾಣವನ್ನು ಕಾಪಾಡಿಕೊಳ್ಳುವುದು.

4) ಇ-ಟೆಂಡರ್ ಪ್ರಕ್ರಿಯೆ ನಡೆಸುವ ಫಸಲಿ ವರ್ಷದಲ್ಲಿ ಇ-ಟೆಂಡರ್ ಗೆ ಲಭ್ಯವಿರುವ 100 ಹೆಕ್ಟೇರ್ ಜಲವಿಸ್ತೀರ್ಣದವರೆಗಿನ ಶೇ. 24.10 ರಷ್ಟು ವಿಸ್ತೀರ್ಣದ ಕೆರೆಗಳನ್ನು ಪಟ್ಟಿ ಮಾಡಿ ಅವುಗಳಲ್ಲಿ ಶೇ.17.15 ರಷ್ಟು ಕೆರೆಗಳನ್ನು ಪರಿಶಿಷ್ಟ ಜಾತಿ ಮತ್ತು ಶೇ 6.95 ಕೆರೆಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಲು ಅಧಿಕಾರಯುಕ್ತ ಸಮಿತಿಯು ನಿರ್ಧರಿಸತಕ್ಕದ್ದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹರಾಜು ಪ್ರಕ್ರಿಯೆಗೆ ಮೀಸಲಿರಿಸಿ ಕೆರೆಗಳ ಇ-ಟೆಂಡರ್ ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳು ಯಾರು ಭಾಗವಹಿಸದೇ ಇದ್ದಲ್ಲಿ ಅಂತಹ ಕೆರೆಗಳನ್ನು ಮತ್ತೊಮ್ಮೆ ಇ-ಟೆಂಡರ್ ಮಾಡಲು ಕ್ರಮ ಕೈಗೊಳ್ಳುವುದು. ಆದಾಗ್ಯೂ ಭಾಗವಹಿಸದೇ ಇದ್ದಲ್ಲಿ, ಅದೇ ಸಮುದಾಯದವರಿಗೆ ನಿಯಮಾನುಸಾರ ಪರವಾನಗಿ ನೀಡಲು ಕ್ರಮ ವಹಿಸುವುದು.

5) ಸದರಿ ಸಮಿತಿಯು ಮೀಸಲಾತಿ ಕಲ್ಪಿಸಲು ತಾಲ್ಲೂಕಿನಲ್ಲಿನ ಕೆರೆಗಳನ್ನು ಆಯ್ಕೆ ಮಾಡಲು ಎಸ್.ಸಿ./ಎಸ್.ಟಿ. ಸಮುದಾಯವು ಹೆಚ್ಚಾಗಿ ವಾಸಿಸುವ / ಕ್ರೋಢೀಕೃತವಾಗಿರುವ ಆಧಾರದ ಮೇಲೆ / ಲಾಟರಿ ಮೂಲಕ / Random zation ಮೂಲಕ ಆಯ್ಕೆ ಮಾಡುವುದು.

6) ಸದರಿ ಸಮಿತಿಯು ಕೆರೆಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಸಾಕಾಗುವಷ್ಟು ನೀರು ಸಂಗ್ರಹವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.

7) ಸರ್ಕಾರದ ಆದೇಶ ಸಂ.ಪಸಂಪಮೀ/125/ಮೀಇಇ/2013 ದಿನಾಂಕ:21.02.2014ರ ಕಂಡಿಕೆ (2)ರಲ್ಲಿ ಸೇರ್ಪಡೆಗೊಳಿಸಲಾಗಿದೆ.

(ಕಾಮಾಕ್ಷಿ ಯು.ಎ.) 18/6/20..
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)



Generated from eOffice by LAKSHMI B, DCF-SDA(LB), SECOND DIVISION ASSISTANT, DIRECTORATE OF FISHERIES

2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
4) ಜಿಲ್ಲಾ ಮಟ್ಟದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರು ಮುಖಾಂತರ.
5) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
6) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
7) ನಿರ್ದೇಶಕರು, ಎಸ್.ಸಿ.ಪಿ./ಟಿ.ಎಸ್.ಪಿ. ಕೋಶ, ಬೆಂಗಳೂರು.
8) ಸಂಬಂಧಪಟ್ಟ ಎಲ್ಲಾ ಜಿಲ್ಲಾ ಮಟ್ಟದ ಸಮಾಜ ಕಲ್ಯಾಣಾಧಿಕಾರಿ / ಜಿಲ್ಲಾ ಪರಿಶಿಷ್ಟ ವರ್ಗದ ಕಲ್ಯಾಣಾಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
9) ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
10) ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
11) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

**ಪ್ರತಿಯನ್ನು**

1) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.

C - 79